# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಮೇ 07, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 355 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 5.00 www.janathavani.com janathavani@mac.com







## ಸರ್ಕಾರದ ದರೋಡೆ, ಲೂಟಿ ಆಡಳಿತ ಬಿಜೆಪಿ ವಿರುದ್ಧ ಸೋನಿಯಾ ವಾಗ್ದಾಳಿ



ಹುಬ್ಬಳ್ಳಿ, ಮೇ 6 – ಬಿಜೆಪಿಯ ಲೂಟಿ, ಸುಳ್ಳು, ಅಹಂಕಾರ ಹಾಗೂ ದ್ವೇಷದ ಆಡಳಿತದಿಂದ ಹೊರ ಬರದೇ ಪ್ರಗತಿ ಸಾಧ್ಯವಿಲ್ಲ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಮೊದಲ ಬಾರಿ ಭಾಗವಹಿಸಿ ಸಮಾವೇಶದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರದ ಕರಾಳ ಆಡಳಿತದ ವಿರುದ್ಧದ ನಮ್ಮ ಧ್ವನಿ ಬಲಪಡಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದವರು ಹೇಳಿದರು.

ತಮ್ಮ ಮಗ ರಾಹುಲ್ ಗಾಂಧಿ ಕೆಲ ದಿನಗಳ ಹಿಂದೆ ದ್ವೇಷ ಹರಡುವವರ ವಿರುದ್ಧ ಭಾರತ್ ಜೋಡೋ ಪಾದಯಾತ್ರೆ ನಡೆಸಿದ್ದರು. ಇದೇ ಕಾರಣದಿಂದಾಗಿ ರಾಹುಲ್ ಗಾಂಧಿ ಅವರ 4 ಸಾವಿರ ಕಿ.ಮೀ. ಉದ್ದದ ಪಾದಯಾತ್ರೆಯಲ್ಲಿ ಲಕ್ಷಾಂತರ ಜನ ಜೊತೆಯಾಗಿದ್ದರು ಎಂದು ಸೋನಿಯಾ ಗಾಂಧಿ ತಿಳಿಸಿದರು.

ಬಿಜೆಪಿ ಈ ಚುನಾವಣೆಯಿಂದ ವಿಚಲಿತವಾಗಿದೆ. ಹೀಗಾಗಿ ಎಲ್ಲಾ ರೀತಿಯ ದಮನದಲ್ಲಿ ತೊಡಗಿದೆ ಎಂದವರು ಟೀಕಿಸಿದರು.

ಆಡಳಿತಾರೂಢರು ದರೋಡೆಯನ್ನೇ ಉದ್ಯಮ ಮಾಡಿಕೊಂಡಿದ್ದಾರೆ ಎಂದು ನಿಮಗೆ ಅನ್ನಿಸುತ್ತಿಲ್ಲವೇ? 2018ರಲ್ಲಿ ನೀವು ಅವರಿಗೆ ಅಧಿಕಾರ ಕೊಟ್ಟಿರಲಿಲ್ಲ. ಆದರೆ, ಅವರು ಸರ್ಕಾರವನ್ನು ದರೋಡೆ ಮಾಡಿ ವಶಪಡಿಸಿಕೊಂಡರು. ಅವರ 40 ಪರ್ಸೆಂಟ್ ಕಮೀಷನ್ ಸರ್ಕಾರ ಲೂಟಿಯಲ್ಲಿ ತೊಡಗಿದೆ ಎಂದು **(2ನೇ ಪುಟಕ್ಕೆ)**

## ಗರೀಬಿ ಹಟಾವೋ ಕಾಂಗ್ರೆಸ್‌ನ ದೊಡ್ಡ ವಂಚನೆ, ಗ್ಯಾರಂಟಿ ನಂಬಬೇಡಿ : ಮೋದಿ



ಬೆಂಗಳೂರು, ಮೇ 6 – ಐವತ್ತು ವರ್ಷಗಳ ಹಿಂದೆ ಕಾಂಗ್ರೆಸ್ ಪಕ್ಷ ಘೋಷಿಸಿದ್ದ 'ಗರೀಬಿ ಹಟಾವೋ' ದೇಶದಲ್ಲಿ ನಡೆದ ಅತಿ ದೊಡ್ಡ ವಂಚನೆಯಾಗಿದೆ. ಈ ವಂಚನೆ ಇನ್ನೂ ನಡೆಯುತ್ತಿದೆ. ಕಾಂಗ್ರೆಸ್ ಗ್ಯಾರಂಟಿಗಳನ್ನು ನಂಬಬಾರದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಬೃಹತ್ ಶೋ ಹಾಗೂ ಬಾದಾಮಿ ಮತ್ತು ಹಾವೇರಿಗಳಲ್ಲಿ ಆಯೋಜಿಸಲಾಗಿದ್ದ ಚುನಾವಣಾ ಸಮಾವೇಶಗಳಲ್ಲಿ ಮಾತನಾಡಿದ ಅವರು, ಚುನಾವಣೆಯ ವೇಳೆ ಕಾಂಗ್ರೆಸ್ ನಾಯಕರ ನಿಂದನೆ ಹಾಗೂ ಸುಳ್ಳುಗಳ ಬಗ್ಗೆಯೂ ಜನ ಆಕ್ರೋಶಗೊಂಡಿದ್ದಾರೆ ಎಂದರು.

ಕಾಂಗ್ರೆಸ್ ಸುಳ್ಳುಗಳನ್ನು ಹರಡುತ್ತಿದೆ. ಆದರೆ, ಆ ಎಲ್ಲ ಸುಳ್ಳುಗಳು ಬಿಜೆಪಿಯ ಅಲೆಯಲ್ಲಿ ಕೊಚ್ಚಿ ಹೋಗಿವೆ. ಕಾಂಗ್ರೆಸ್‌ನಲ್ಲಿ ಇನ್ನೂ ಏನಾದರೂ ಉಳಿದಿದೆ ಎಂದು ಅವರು ಭಾವಿಸುವುದಾದರೆ, ಅವರು ಕರ್ನಾಟಕಕ್ಕೆ ಬಂದು ನೋಡಲಿ. ಕಾಂಗ್ರೆಸ್ ಸರ್ಕಾರದ ಓಲೈಕೆಯ ಹಾಗೂ ನಿಷೇಧದ ನೀತಿಗಳ ಬಗ್ಗೆ ಪ್ರತಿಯೊಬ್ಬ ನಾಗರಿಕ ಅರಿತಿದ್ದಾನೆ ಎಂದರು.

ಕಾಂಗ್ರೆಸ್ ಪಕ್ಷ ದೇಶ ಹಾಗೂ ರಾಜ್ಯಗಳೆರಡರಲ್ಲೂ ಸುದೀರ್ಘ ಕಾಲ ಆಡಳಿತ ನಡೆಸಿತ್ತು. ಆದರೆ, ರಾಜ್ಯದಲ್ಲಿ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರ ಮೂರೂವರೆ ವರ್ಷಗಳಿಂದ ಮಾತ್ರ ಇದೆ. ಈ ಅಲ್ಪ ಅವಧಿಯಲ್ಲೇ ಡಬಲ್ ಇಂಜಿನ್ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡಿದೆ ಎಂದು ಪ್ರಧಾನಿ ಹೇಳಿದರು.

ಕಾಂಗ್ರೆಸ್ ಅಂದರೆ ಸಂಪೂರ್ಣ ಭ್ರಷ್ಟಾಚಾರ, ಹಗರಣ, 85 ಪರ್ಸೆಂಟೇಜ್ **(4ನೇ ಪುಟಕ್ಕೆ)**







## ಮಾಯಕೊಂಡ ಕ್ಷೇತ್ರದಲ್ಲಿ ಇಂದು ಪುಷ್ಪಾ ವಾಗೀಶ್ ಸ್ವಾಮಿ ಪ್ರಚಾರ



ಮಾಯಕೊಂಡ ಮೀಸಲು ವಿಧಾನ ಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಶ್ರೀಮತಿ ಪುಷ್ಪಾ ವಾಗೀಶ್ ಸ್ವಾಮಿ ಅವರು ಇಂದು ಬೆಳಿಗ್ಗೆ 8 ಗಂಟೆಯಿಂದ ನೇರ್ಲಿಗಿ, ಸುಲ್ತಾನಿಪುರ, ಕೊಡಗನೂರು, ಗಂಗನಕಟ್ಟೆ, ಚಿನ್ನಸಮುದ್ರ, ನರಗನಹಳ್ಳಿ, ಹೊನ್ನನಾಯ್ಕನಹಳ್ಳಿ, ಓವೇನಹಳ್ಳಿ, ಅಣ್ಣಾಪುರ, ಬಾವಿಹಾಳ್, ಪರಶುರಾಂಪುರ, ದಿಂಡದಹಳ್ಳಿ, ಮಾಗಡಿ, ಹಿಂಡಸಘಟ್ಟೆ, ಕಾಶೀಪುರ, ಕೋಡಿಹಳ್ಳಿ, ತೋಳಹುಣಸೆ, ಕುರ್ಕಿ, ವಿಠಲಾಪುರ, ವಂಟಿಹಾಳ್, ಕೋಡಿಹಳ್ಳಿ ಕ್ಯಾಂಪ್, ಕಾಶೀಪುರ ಕ್ಯಾಂಪ್, ಪಾಮೇನಹಳ್ಳಿಯಲ್ಲಿ ಪ್ರಚಾರ ಮಾಡಲಿದ್ದಾರೆ.

## ರೋಗಿಗಳ ಪರ ಕಾಳಜಿ ಮೆರೆದ ನಾಗರಾಜ್ ಲೋಕಿಕೆರೆ



ದಾವಣಗೆರೆ, ಮೇ 6 - ನಗರದ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಮತ ಪ್ರಚಾರವಷ್ಟೇ ಅಲ್ಲದೇ ರೋಗಿಗಳ ಪರ ಕಾಳಜಿ ಮೆರೆದಿದ್ದಾರೆ.

ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಆಸ್ಪತ್ರೆಗಳಿಗೆ ಭೇಟಿ ನೀಡಿ, ರೋಗಿಗಳ ಕುಶಲೋಪರಿ ವಿಚಾರಿಸಿದರು. ಇದೇ ವೇಳೆ ಕ್ಷೇತ್ರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ವೈದ್ಯರೊಂದಿಗೆ ಚರ್ಚಿಸಿದರು.

# ಸೂರ್ಯನಷ್ಟೇ ಸತ್ಯ ಕಾಂಗ್ರೆಸ್ ಗೆಲುವು

## ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ ವಿಶ್ವಾಸ



ಹರಪನಹಳ್ಳಿ, ಮೇ 6- ಎಂ.ಪಿ.ಪ್ರಕಾಶ್‌ವ ಅರು ಸೈದ್ಧಾಂತಿಕತೆಯ ಅಡಿಯಲ್ಲಿ ರಾಜಕಾರಣ ಮಾಡಿದವರು. ಇಂದು ಅವರ ಮಕ್ಕಳು ಕಾಂಗ್ರೆಸ್ ತೊರೆದು ಪಕ್ಷೇತರರಾಗಿ ಸ್ಪರ್ಧಿಸಿ, ತಂದೆ ಎಂ.ಪಿ. ಪ್ರಕಾಶ್‌ರವರ ಸಿದ್ಧಾಂತವನ್ನು ಗಾಳಿಗೆ ತೂರಿದ್ದಾರೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಕಿಡಿ ಕಾರಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದ ಆವರಣದಲ್ಲಿ ಇಂದು ಏರ್ಪಾಡಾಗಿದ್ದ ವಾಲ್ಮೀಕಿ ನಾಯಕ ಸಮುದಾಯದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪಕ್ಷೇತರ ಅಭ್ಯರ್ಥಿಗೆ ಮತ ಹಾಕಿದರೆ ಆಟಕ್ಕುಂಟು ಲೆಕ್ಕಕ್ಕಿಲ್ಲ, ಗೆದ್ದರೆ ಕ್ಷೇತ್ರಕ್ಕೆ ಪೂರಕ ಅಭಿವೃದ್ಧಿ ಕೆಲಸಗಳು ಆಗುವುದಿಲ್ಲ. ಹಾಗಾಗಿ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕುವಂತೆ ಮತದಾರರಲ್ಲಿ ಮನವಿ ಮಾಡಿದರು.

ಪೂರ್ವದಲ್ಲಿ ಸೂರ್ಯ ಹುಟ್ಟುವುದು ಎಷ್ಟು ಸತ್ಯವೋ ಹರಪನಹಳ್ಳಿಯಲ್ಲಿ ಕಾಂಗ್ರೆಸ್ ಗೆಲ್ಲುವುದು ಅಷ್ಟೇ ಸತ್ಯ. ಈ ಹಿಂದೆ ಕಾಂಗ್ರೆಸ್ ನೀಡಿದ 165 ಭರವಸೆಗಳಲ್ಲಿ 159 ಭರವಸೆಗಳನ್ನು ಈಡೇರಿಸಿ, ನುಡಿದಂತೆ ನಡೆದಿದ್ದೇವೆ. ಆದರೆ ಬಿಜೆಪಿ 600 ಭರವಸೆಗಳನ್ನು ನೀಡಿ ಕೇವಲ 50 ಭರವಸೆಗಳನ್ನು ಈಡೇರಿಸಲು ಸಾಧ್ಯವಾಗಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಈ ಬಾರಿ 135 ರಿಂದ 150 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿಯಲಿದೆ. ಬಿಜೆಪಿಯ ಮುಖ್ಯಮಂತ್ರಿಯಾದಿಯಾಗಿ ಯಾರೊಬ್ಬ ನಾಯಕರ ಮುಖ ನೋಡಿ ಜನ ಮತ ಹಾಕುವುದಿಲ್ಲ ಎಂದು ಅವರಿಗೆ ಮನವರಿಕೆ ಆಗಿದ್ದು, ಹಾಗಾಗಿ ಪದೇ ಪದೇ ಪ್ರಧಾನಿ ನರೇಂದ್ರ ಮೋದಿಯವರನ್ನು ರಾಜ್ಯಕ್ಕೆ ಕರೆ ತರುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಹಡಗಲಿ ಶಾಸಕ ಪಿ.ಟಿ.ಪರಮೇಶ್ವರ ನಾಯ್ಕ ಮಾತನಾಡಿ, ಕೊಟ್ರೇಶ್‌ರವರು ಕೇವಲ ಪಂಚಮಸಾಲಿ ಸಮಾಜಕ್ಕೆ ಸೀಮಿತವಾಗಿಲ್ಲ. ಅವರು ಎಲ್ಲಾ ಜನಾಂಗದವರ ಪರವಾಗಿದ್ದಾರೆ. ಕೆಲವರು ಕ್ಷೇತ್ರದಲ್ಲಿ ಕೊಟ್ರೇಶ್ ಅವರ ಬಗ್ಗೆ ಜಾತಿ ಪಟ್ಟ ಕಟ್ಟಿ ಅಪಪ್ರಚಾರ ಮಾಡುತ್ತಿದ್ದಾರೆ. ಅಂತವರ ಬಗ್ಗೆ ಜನ ಕಿವಿಗೊಡದೆ ಯಾವುದೇ ಆಸೆ-ಅಮಿಷಗಳಿಗೆ ಒಳಗಾಗದೆ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವ ಮೂಲಕ ಕೊಟ್ರೇಶ್ ಅವರನ್ನು ಆಶೀರ್ವದಿಸಬೇಕು ಎಂದು ಕೋರಿದರು.

ಕಾಂಗ್ರೆಸ್ ಅಭ್ಯರ್ಥಿ ಎನ್.ಕೊಟ್ರೇಶ್ ಮಾತನಾಡಿ, ನಾನೂ ಯಾವುದೇ ಒಂದು ವರ್ಗಕ್ಕೆ ಸೀಮಿತನಾಗಿಲ್ಲ. ಕ್ಷೇತ್ರದ ಎಲ್ಲಾ ವರ್ಗದ ಜನರನ್ನು ಪ್ರೀತಿ, ವಿಶ್ವಾಸದಿಂದ ಕಾಣುತ್ತಾ ಬಂದಿದ್ದೇನೆ. ಆ ಕಾರಣಕ್ಕಾಗಿ ಕಾಂಗ್ರೆಸ್ ಪಕ್ಷ ನನ್ನನ್ನು ಗುರುತಿಸಿ ಟಿಕೆಟ್ ನೀಡಿದ್ದು ಕ್ಷೇತ್ರದಲ್ಲಿ ನನ್ನ ಪರವಾಗಿ ಅಭೂತಪೂರ್ವ ಬೆಂಬಲ ಸಿಗುತ್ತಿದೆ. ಎರಡು ಬಾರಿ ಸೋತಿರುವ ನನಗೆ ಈ ಬಾರಿ ಜನ ಹೆಚ್ಚಿನ ಸಂಖ್ಯೆಯಲ್ಲಿ ಮತ ನೀಡಿ ಆಶೀರ್ವದಿಸಲಿದ್ದಾರೆ ಎಂದರು.

ಚುನಾವಣಾ ಉಸ್ತುವಾರಿ ಹಾಗೂ ಮಹಾರಾಷ್ಟ್ರ ಶಾಸಕರಾದ ಪ್ರಣತಿ, ಮುಖಂಡರಾದ ಆಲದಳ್ಳಿ ಷಣ್ಮುಖಪ್ಪ, ಸಿಂಧೆ, ಚಂದ್ರಶೇಖರ್ ಭಟ್, ಎಂ.ರಾಜಶೇಖರ್, ಹೆಚ್.ಬಿ.ಪರಶುರಾಮಪ್ಪ, ಶಶಿಧರ ಪೂಜಾರ್, ಅಂಬಾಡಿ ನಾಗರಾಜ್, ಹಾಲೇಶಗೌಡ, ಹೆಚ್.ಕೆ.ಹಾಲೇಶ್, ಮಾತನಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಎಸ್ಟಿ ಘಟಕದ ತಾಲ್ಲೂಕು ಅಧ್ಯಕ್ಷ ಬಿ.ವಾಗೀಶ್ ಪುರಸಭೆ ಸದಸ್ಯರಾದ ಭರತೇಶ್, ಜಾಕೀರ್ ಮುಖಂಡರಾದ ಪಿ.ಎಲ್.ಪೋಮ್ಯಾನಾಯ್ಕ್, ಪ್ರಕಾಶ ಪಾಟೀಲ್ ಇಟ್ಟಿಗುಡಿ ಅಂಜಿನಪ್ಪ, ಮುತ್ತಿಗಿ ಜಂಭಣ್ಣ, ಯಡಿಹಳ್ಳಿ ಶೇಖರಪ್ಪ, ಹಿರೇಮೇಗಳಗೆರೆ ಪರಶುರಾಮಪ್ಪ, ತಲವಾಗಲು ನಂದ್ಯಪ್ಪ, ಎ. ಮೂಸಾಸಾಬ್, ವೈ.ಬಸಪ್ಪ, ಅಲಮರಸಿಕೇರಿ ಜಗದೀಶ್, ಕರೂರು ಹನುಮಂತಪ್ಪ, ಚಿರಸ್ತಳ್ಳಿ ಮರಿಯಪ್ಪ, ಪಿ.ಅರುಣ್, ಪಿ.ಕೆ.ನಾಗಲಿಂಗಯ್ಯ, ಮತ್ತಿಹಳ್ಳಿ ಬೆಟ್ಟನಗೌಡ, ಗಿಡ್ಡಳ್ಳಿ ನಾಗರಾಜ್, ಪಿ. ಪರಶುರಾಮ್ ಸೇರಿದಂತೆ ಇತರರು ಇದ್ದರು.

## ರಂಭಾಪುರಿ ಶಾಖೆ ಹಲಗೂರು ಬೃಹನ್ಮಠಕ್ಕೆ ಉತ್ತರಾಧಿಕಾರಿಯಾಗಿ ಶಿವಲಿಂಗ ಸ್ವಾಮಿ



ಬಾಳೆಹೊನ್ನೂರು, ಮೇ 6- ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ರಂಭಾಪುರಿ ಶಾಖೆ ಹಲಗೂರು ಬೃಹನ್ಮಠಕ್ಕೆ ವೈ.ಜಿ. ಶಿವಲಿಂಗಸ್ವಾಮಿ ಎಂಬವಟುವನ್ನು ನಿಯುಕ್ತಿಗೊಳಿಸಲಾಗಿದೆ ಎಂದು ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಪ್ರಕಟಿಸಿದ್ದಾರೆ.

ಶ್ರೀ ರಂಭಾಪುರಿ ಪೀಠದಲ್ಲಿ ಶನಿವಾರ ಹಲಗೂರು ಬೃಹನ್ಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ ಹಾಗೂ ಹಲಗೂರು ಮಠದ ಶಿಷ್ಯ ಮಂಡಳಿಯವರು ಪರಸ್ಪರ ಸಮಾಲೋಚಿಸಿದ ನಂತರ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಯಗಟಿ ಗ್ರಾಮದ ಜಯದೇವ ಶಾಸ್ತ್ರಿ ಮತ್ತು ಕಾತ್ಯಾಯಿನಿ ದಂಪತಿ ಸುಪುತ್ರರೂ, ಬಿಎ ಪದವೀಧರರೂ, ವೇದ ಉಪನಿಷತ್ ಬಲ್ಲವರೂ ಆದ ವೈ.ಜಿ. ಶಿವಲಿಂಗಸ್ವಾಮಿ ಅವರರನ್ನು ನಿಯುಕ್ತಿಗೊಳಿಸಲಾಯಿತು. ವೀರಶೈವ ಧರ್ಮ ಪರಂಪರೆಯಂತೆ ಶ್ರೀ ರಂಭಾಪುರಿ ಜಗದ್ಗುರು ಸಾನ್ನಿಧ್ಯದಲ್ಲಿ ಬರುವ ಜೂನ್ 13 ಮತ್ತು 14 ರಂದು ಹಲಗೂರು ಬೃಹನ್ಮಠಕ್ಕೆ ಶ್ರೀ ಗುರು ಪಟ್ಟಾಧಿಕಾರ ನೆರವೇರಿಸಲು ತೀರ್ಮಾನಿಸಲಾಗಿದೆ.

ಹಲಗೂರು ಮಠಾಧ್ಯಕ್ಷರಾದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಎಲ್ಲಾ ಕಾರ್ಯಗಳನ್ನು ನೆರವೇರಿಸುವ ನಿರ್ಧಾರ ಕೈಗೊಳ್ಳಲಾಯಿತು.

ಈ ಸಂದರ್ಭದಲ್ಲಿ ಹಂಪಸಾಗರದ ಶ್ರೀ ಶಿವಲಿಂಗ ರುದ್ರಮುನಿ ಶಿವಾಚಾರ್ಯ ಸ್ವಾಮೀಜಿ, ಹನುಮಾಪುರದ ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ, ಹಲಗೂರಿನ ವೀರಶೈವ ಸಮಾಜದ ಅಧ್ಯಕ್ಷ ರವಿ ನಾಗರಾಜಪ್ಪ ಹಾಗೂ ಸಮಾಜದ ಗಣ್ಯರು ಉಪಸ್ಥಿತರಿದ್ದರು.

## ಕಸಾಪ ಕಾರ್ಯ ಶ್ಲಾಘನೀಯ : ಹಾಲಸ್ವಾಮಿ



ಚನ್ನಗಿರಿ, ಮೇ 6- ಕನ್ನಡ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ಸಂವರ್ಧನೆಗಾಗಿ ಅಖಿಲ ಭಾರತೀಯ ಮಟ್ಟ, ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಶ್ಲಾಘನೀಯ ಕಾರ್ಯನಿರ್ವಹಣೆ ಮಾಡುತ್ತಿದೆ ಎಂದು ಕನ್ನಡ ಪರಿಚಾರಕ ಕೆ. ಹಾಲಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

ತಾಲ್ಲೂಕಿನ ಬಸವಾಪಟ್ಟಣದ ಬಾಪೂಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಇಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಕನ್ನಡ ಅಸ್ಮಿತೆ: ಕನ್ನಡ ಸಾಹಿತ್ಯ ಪರಿಷತ್ತು' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಪರಿಸರವಾದಿ ಷಣ್ಮುಖಪ್ಪ ನೆರವೇರಿಸಿದರು. ಮುಖ್ಯ ಶಿಕ್ಷಕ ಎಂ.ಶ್ರೀಧರರಾವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಯು. ಚನ್ನಬಸಪ್ಪ, ಕಾರ್ಯದರ್ಶಿ ಮಂಟರಘಟ್ಟೆ ಬಸವನಗೌಡ, ಕೋಶಾಧ್ಯಕ್ಷ ಬಿ.ಈ. ಸಿದ್ದಪ್ಪ, ಕಸಾಪ ಸದಸ್ಯರಾದ ಮಹಾದೇವಪ್ಪ, ಎಂ.ಎನ್.ಷಣ್ಮುಖಪ್ಪ, ಮಂಜುನಾಥ್ ಮತ್ತಿತರು ಇದ್ದರು.

## ರಾಣೇಬೆನ್ನೂರು : ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಸತ್ಯನಾರಾಯಣ ಪೂಜೆ



ರಾಣೇಬೆನ್ನೂರು, ಮೇ 6 - ಶ್ರೀ ಸಿದ್ದೇಶ್ವರ ನಗರದಲ್ಲಿ ಪದ್ಮಶಾಲಿ ಸಮಾಜದ ಶ್ರೀ ಗುರು ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಬೌದ್ಧ ಪೂರ್ಣಿಮೆಯ ಅಂಗವಾಗಿ ಸರ್ವ ಧರ್ಮ ಸಾಮೂಹಿಕ ಶ್ರೀ ಸತ್ಯ ನಾರಾಯಣ ಪೂಜೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಿಲ್ಲಾ ಅಧ್ಯಕ್ಷ ಹನುಮಂತಪ್ಪ ಟಿ ಮುಕ್ತೇನಹಳ್ಳಿ, ಮಾರುತಿ ಗರಡಿಮನಿ, ಲಕ್ಷ್ಮಣ ಕಡ್ಲಿಬಾಳ, ಬಸವರಾಜ ಐರಣಿ, ಪರಶುರಾಮ ಅಗಡಿ, ರವಿ ಕಿಚಿಡಿ, ಮುದಪ್ಪ ಕಿಚಿಡಿ, ಶಾಂತಮ್ಮ ಕಿಚಿಡಿ, ಪ್ರದೀಪ ಶಿಗ್ಲಿ, ಪ್ರವೀಣ್ ಗುತ್ತಲ, ಚನ್ನಬಸಮ್ಮ ಕಾಮಣ್ಣನವರ, ಪ್ರೇಮಾ ಶೆಟ್ಟಿ, ಶಾಂತವಿರಯ್ಯ ಸ್ವಾಮೀಜಿ ಹಾಗೂ ಇನ್ನೂ ಅನೇಕ ಭಕ್ತಾಧಿಗಳು ಭಾಗಿಯಾದ್ದರು.

## ನಗರದಲ್ಲಿ ನಾಳೆ ಪಶುಸಂಗೋಪನಾ ತರಬೇತಿ

ದಾವಣಗೆರೆ, ಮೇ 6 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಇದೇ ದಿನಾಂಕ 8 ಮತ್ತು 9 ರಂದು ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ರೈತರಿಗೆ ಪಶುಸಂಗೋಪನಾ ಚಟುವಟಿಕೆಗಳ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ನಗರದಲ್ಲಿ ಇಂದು ಆರೋಗ್ಯ ತಪಾಸಣಾ ಶಿಬಿರ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಹೋಮಿಯೋಪಥಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಎ. ಎನ್. ಸುಂದರೇಶ್, ಡಾ. ಆರತಿ ಸುಂದರೇಶ್ ಆರೋಗ್ಯ ತಪಾಸಣೆ ನಡೆಸಲಿದ್ದಾರೆ.

## ಬಿ.ಜಿ. ಅಜಯ್‌ಕುಮಾರ್ ಪರ ಕೇಂದ್ರ ಸಚಿವೆ ಸ್ಮೃತಿ ಇರಾನಿ ರೋಡ್ ಶೋ





ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಜಿ. ಅಜಯ್‌ಕುಮಾರ್ ಪರವಾಗಿ ಕೇಂದ್ರ ಸಚಿವರಾದ ಶ್ರೀಮತಿ ಸ್ಮೃತಿ ಇರಾನಿ ಅವರು ಇಂದು ರೋಡ್ ಶೋ ನಡೆಸುವರು.

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದದಿಂದ ಹೊರಡುವ ರೋಡ್ ಶೋ, ಶಿವಾಜಿ ಸರ್ಕಲ್, ಹಗೇದಿಬ್ಬ ಸರ್ಕಲ್, ಕಾಳಿಕಾದೇವಿ ರಸ್ತೆ, ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬ, ವಸಂತ ಟಾಕೀಸ್ ರಸ್ತೆ, ಬಾರ್‌ಲೈನ್ ರಸ್ತೆ, ಜನತಾ ವಿದ್ಯಾಲಯ ಶಾಲೆ, ಜಾಲಿನಗರದ ಮೂಲಕ ಶಿವಾಲಿ ಟಾಕೀಸ್ ಮುಖ್ಯರಸ್ತೆ, ಶ್ರೀ ವೀರಮದಕರಿ ನಾಯಕ ವೃತ್ತ, ರೈಲ್ವೇಗೇಟ್‌ನಿಂದ ಅರುಣಾ ಟಾಕೀಸ್ ಸರ್ಕಲ್ ವರೆಗೂ ನಡೆಯಲಿದೆ.

ರೋಡ್ ಶೋನಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಆನಂದರಾವ್ ಶಿಂಧೆ, ಶ್ರೀನಿವಾಸ ದಾಸಕರಿಯಪ್ಪ ಸೇರಿ ಇತರರು ಭಾಗವಹಿಸಲಿದ್ದಾರೆ ಎಂದು ಮಂಡಲ ಪ್ರಧಾನ ಕಾರ್ಯದರ್ಶಿ ರಾಜು ನೀಲಗುಂದ ತಿಳಿಸಿದ್ದಾರೆ.

## ಬಿಜೆಪಿಯ ಟಿ.ಮುಕುಂದ ಜೆಡಿಎಸ್ ಸೇರ್ಪಡೆ



ಹರಿಹರ, ಮೇ 6- ಬಿಜೆಪಿ ತೊರೆದಿದ್ದ ಜಿ.ಪಂ. ಮಾಜಿ ಉಪಾಧ್ಯಕ್ಷ ಟಿ.ಮುಕುಂದ ಅವರು ಗುರುವಾರ ಬಾಡದಲ್ಲಿ ನಡೆದ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಚುನಾವಣಾ ಪ್ರಚಾರದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಮಾಜಿ ಶಾಸಕ ಹಾಗೂ ಹರಿಹರ ಜೆಡಿಎಸ್ ಅಭ್ಯರ್ಥಿ ಹೆಚ್.ಎಸ್.ಶಿವಶಂಕರ್, ಚನ್ನಗಿರಿ ಜೆಡಿಎಸ್ ಅಭ್ಯರ್ಥಿ ತೇಜಸ್ವಿ ಪಟೇಲ್, ಮಾಯಕೊಂಡ ಜೆಡಿಎಸ್ ಅಭ್ಯರ್ಥಿ ಹೆಚ್. ಆನಂದಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು ರೋಡ್ ಶೋ



ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಇಂದು ಬೆಳಿಗ್ಗೆ 10 ಗಂಟೆಗೆ ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬೃಹತ್ ರೋಡ್ ಶೋ ಮೂಲಕ ಮತಯಾಚನೆ ಮಾಡಲಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ನಿಟುವಳ್ಳಿಯ ದುರ್ಗಾಂಬಿಕಾ ದೇವಸ್ಥಾನದಿಂದ ಆರಂಭಗೊಳ್ಳುವ ರೋಡ್ ಶೋ, ಆರ್. ಎಸ್.ಶೇಖರಪ್ಪ ಅವರ ಮನೆ ಮುಖಾಂತರ, ಹೆಚ್.ಕೆ.ಆರ್ ಮನೆ ಹತ್ತಿರ ಬಲಕ್ಕೆ ತಿರುಗಿ, ಕೆಟಿಜೆ ನಗರ ಪೊಲೀಸ್ ಠಾಣೆ ರಸ್ತೆ, ಡಾಂಗೆ ಪಾರ್ಕ್, ಬಳ್ಳಾರಿ ಸಿದ್ದಮ್ಮ ಪಾರ್ಕ್, ಕೆಬಿ ಬಡಾವಣೆ, ತ್ರಿಶೂಲ್ ಥೇಟರ್ ರಸ್ತೆ, ಶಿವಪ್ಪಯ್ಯ ಸರ್ಕಲ್, ಚೇತನ ಹೋಟೆಲ್ ರಸ್ತೆ, ರಾಂ ಅಂಡ್ ಕೋ ವೃತ್ತ, ಚರ್ಚ್ ರಸ್ತೆ, ವಿನೋಬನಗರದ 2ನೇ ಮುಖ್ಯ ರಸ್ತೆ, ಪಿಬಿ ರಸ್ತೆ, ಅರುಣ ಸರ್ಕಲ್, ರೈತರ ಬೀದಿ, ಹೈಸ್ಕೂಲ್ ಮೈದಾನದಲ್ಲಿ ಕೊನೆಗೊಳ್ಳುವುದು.

## 31ನೇ ವಾರ್ಡಿನಲ್ಲಿ ಲೋಕಿಕೆರೆ ನಾಗರಾಜ್ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆ




ದಾವಣಗೆರೆ, ಮೇ 6 - ಉತ್ತರ ವಿಧಾನಸಭಾ ಕ್ಷೇತ್ರದ 31ನೇ ವಾರ್ಡ್‌ನ 100ಕ್ಕೂ ಹೆಚ್ಚು ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ತೊರೆದು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ, ಬಿಜೆಪಿಗೆ ಅಧಿಕೃತವಾಗಿ ಸೇರ್ಪಡೆ ಮಾಡಿಕೊಳ್ಳಲಾಯಿತು.

## ನಗರದಲ್ಲಿ ವಿಕಲಚೇತನರಿಂದ ಮತದಾನ ಜಾಗೃತಿ

ವಿಧಾನಸಭಾ ಚುನಾವಣೆ ಅಂಗವಾಗಿ ನಗರದ ಜಯದೇವ ವೃತ್ತದಲ್ಲಿ ಇಂದು ಸಂಜೆ 4 ಕ್ಕೆ ವಾಕ್ ಮತ್ತು ಶ್ರವಣದೋಷವುಳ್ಳ ವಿಶೇಷಚೇತನರಿಂದ ಮಾನವ ಸರಪಳಿ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.


## ಎಂಟನೇ ವರ್ಷದ ಪುಣ್ಯಸ್ಮರಣೆ



ಜನನ : 01.07.1949 ಮರಣ : 07.05.2015

ಉಸಿರು ಹೋದರೂ ಹೆಸರು ಉಳಿಸಿದ

**ಶ್ರೀ ಪಿ. ರಾಮನಗೌಡ್ರು**

ಹಿರಿಯ ವಕೀಲರು ಹಾಗೂ ಅಧ್ಯಕ್ಷರು, ಡಿಡಿಸಿಸಿ ಬ್ಯಾಂಕ್, (2013-2015) ದಾವಣಗೆರೆ ಜಿಲ್ಲೆ.

*ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ*

ಶ್ರೀಮತಿ ಪಿ. ಕೊಟ್ರಮ್ಮ ರಾಮನಗೌಡ್ರು ಮತ್ತು ಮಕ್ಕಳು, ಮೊಮ್ಮಕ್ಕಳು.

ಚಿಗಟೇರಿ ಪರಶುರಾಮಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.


## ಬಿಜೆಪಿ ವಿರುದ್ಧ ಸೋನಿಯಾ ವಾಗ್ದಾಳಿ

(1ನೇ ಪುಟದಿಂದ) ಕಾಂಗ್ರೆಸ್ ನಾಯಕಿ ಆರೋಪಿಸಿದರು.

ಬಿಜೆಪಿ ನಾಯಕರು ಅಹಂಕಾರಿಗಳು. ಅವರು ಯಾವುದೇ ಪ್ರಶ್ನೆಗೆ ಉತ್ತರಿಸುವುದಿಲ್ಲ. ಅವರಿಗೆ ಬರೆಯಲಾಗುವ ಯಾವುದೇ ಪತ್ರಕ್ಕೆ ಪ್ರತಿಕ್ರಿಯಿಸುವುದಿಲ್ಲ ಎಂದರು. ಪರೋಕ್ಷವಾಗಿ ಅವರು 40 ಪರ್ಸೆಂಟ್ ಕಮೀಷನ್ ಕುರಿತು ಗುತ್ತಿಗೆದಾರರ ಸಂಘದಿಂದ ಬರೆದ ಪತ್ರದ ಬಗ್ಗೆ ಪ್ರಧಾನ ಮಂತ್ರಿ ಉತ್ತರಿಸದ ಬಗ್ಗೆ ಪ್ರಸ್ತಾಪಿಸಿದರು.

ಬಿಜೆಪಿ ಯಾವುದೇ ಉತ್ತರದಾಯಿತ್ವ ಹೊಂದಿಲ್ಲ. ಎಲ್ಲಾ ಸಂವಿಧಾನಿಕ ಸಂಸ್ಥೆಗಳು ನಮ್ಮ ಜೇಬಿನಲ್ಲಿವೆ ಎಂದವರು ಭಾವಿಸಿದ್ದಾರೆ. ಪ್ರಜಾಪ್ರಭುತ್ವ ಈ ರೀತಿಯ ಕಾರ್ಯನಿರ್ವಹಿಸಲು ಸಾಧ್ಯವಾಗದು ಎಂದು ಸೋನಿಯಾ ಗಾಂಧಿ ಹೇಳಿದರು.

ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರದೇ ಹೋದರೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಶೀರ್ವಾದ ಸಿಗದೇ ಹೋಗಬಹುದು ಎಂದು ಬಹಿರಂಗವಾಗಿ ಬೆದರಿಕೆ ಹಾಕುವ ಮಟ್ಟಕ್ಕೆ ಬಿಜೆಪಿ ನಾಯಕರು ಹೋಗಿದ್ದಾರೆ ಎಂದವರು ಆಕ್ಷೇಪಿಸಿದರು.

ಬಿಜೆಪಿ ಅಧಿಕಾರಕ್ಕೆ ಬರದೇ ಇದ್ದರೆ ಗಲಭೆಗಳಾಗುತ್ತವೆ ಎಂದು ಅವರು (ಕೇಂದ್ರ ಗೃಹ ಸಚಿವ ಅಮಿತ್ ಷಾ) ಹೇಳಿದ್ದಾರೆ. ಕರ್ನಾಟಕದ ಜನರನ್ನು ಅಷ್ಟು ಅಬಲ ಹಾಗೂ ಅಸಹಾಯಕ ಎಂದು ಭಾವಿಸಬಾರದು. ರಾಜ್ಯದ ಜನ ಯಾರದೋ ಆಶೀರ್ವಾದ ಅವಲಂಬಿಸಿಲ್ಲ. ಅವರು ಪರಿಶ್ರಮಿ ಗಳು ಎಂದು ಸೋನಿಯಾ ಗಾಂಧಿ ಹೇಳಿದರು.

## ನಗರದಲ್ಲಿ ನಾಳೆ ಚುನಾವಣಾ ಜಾಗೃತಿ ರಂಗೋಲಿ ಪ್ರಕೃತಿ

ದಾವಣಗೆರೆ, ಮೇ 6- ನಗರದ ಕಲಾಕುಂಚ ವಿದ್ಯಾನಗರ ಶಾಖೆ ಮತ್ತು ಭರತಾಂಜಲಿ ನೃತ್ಯ ಕಲಾ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 8 ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ವಿದ್ಯಾನಗರ ಭರತಾಂಜಲಿ ನೃತ್ಯ ಕಲಾ ಅಕಾಡೆಮಿ ಸಭಾಂಗಣದಲ್ಲಿ ಬೃಹತ್ ರಂಗೋಲಿಯೊಂದಿಗೆ 'ಚುನಾವಣಾ ಜಾಗೃತಿ ರಂಗೋಲಿ ಪ್ರಕೃತಿ' ಹಾಗೂ 'ನೃತ್ಯ ಗಾನಯಾನ' ಪರಿಕಲ್ಪನೆಯೊಂದಿಗೆ ಮತದಾನ ಕುರಿತು ಸಾರ್ವಜನಿಕರಲ್ಲಿ ಅರಿವು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸರಳ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭರತಾಂಜಲಿ ನೃತ್ಯ ಕಲಾ ಅಕಾಡೆಮಿ ಪ್ರಾಚಾರ್ಯರಾದ ಡಾ. ಮಂಗಳಾ ಶೇಖರ್, ಶಾಖೆಯ ಅಧ್ಯಕ್ಷ ರಾಜಶೇಖರ ಬೆನ್ನೂರು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 9448423683, 9901715102.


## ನೀತಿ ಸಂಹಿತೆ ಉಲ್ಲಂಘನೆ; 26.84 ಲೀ ಮದ್ಯ ವಶ

ದಾವಣಗೆರೆ, ಮೇ 6- ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ನೀತಿ ಸಂಹಿತೆ ಜಾರಿಯಲ್ಲಿದ್ದು, ಜಿಲ್ಲೆಯಾದ್ಯಂತ ಕಟ್ಟುನಿಟ್ಟಿನ ಚೆಕ್‌ಪೋಸ್ಟ್ ವ್ಯವಸ್ಥೆ ಮಾಡಲಾಗಿದೆ. ಇಂದು 10788 ಮೌಲ್ಯದ 26.84 ಲೀ ಮದ್ಯ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ವಿವಿಧ ಚೆಕ್‌ಪೋಸ್ಟ್‌ಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಕೈಗೊಳ್ಳಲಾಗುತ್ತಿದ್ದು, ಇದೂವರೆಗೆ 9474057 ರೂ. ನಗದು, ರೂ.31729340.99 ಮೌಲ್ಯದ 47308.885 ಲೀ ಮದ್ಯ, 3.853 ಕೆ.ಜಿ ಮಾದಕ ವಸ್ತು ಅಂದಾಜು ಮೌಲ್ಯ ರೂ. 71610, ರೂ.8498048 ಮೌಲ್ಯದ ಕುಕ್ಕರ್ ಸೇರಿದಂತೆ ಇತರೆ ವಸ್ತುಗಳು ಒಟ್ಟು ರೂ.4.97 ಕೋಟಿಯಷ್ಟು ನಗದು ಮತ್ತು ಇತರೆ ವಸ್ತುಗಳನ್ನು ನೀತಿ ಸಂಹಿತೆ ಆರಂಭವಾದಾಗಿನಿಂದ ಇಲ್ಲಿಯವರೆಗೆ ವಶಪಡಿಸಿಕೊಳ್ಳಲಾಗಿದೆ.

ಇಂದು 26.84 ಲೀ ಮದ್ಯವನ್ನು ಅಬಕಾರಿ ಇಲಾಖೆಯಿಂದ ಕಾರ್ಯಾಚರಣೆ ಮಾಡಿ ವಶಪಡಿಸಿಕೊಳ್ಳಲಾಗಿದೆ.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 6.5.2023 ಶನಿವಾರ ನಿಧನಾರಾದ ಶಿವಕುಮಾರಸ್ವಾಮಿ ಬಡಾವಣೆ ನಿವಾಸಿ

ಈಶ್ವರ ವಿನಾಯಕ ಟ್ರಸ್ಟ್‌ನ ಸದಸ್ಯರಾದ

**ಬಿ.ಸಿ. ಸಣ್ಣಪ್ಪ**

ಇವರ ಆತ್ಮಕ್ಕೆ ಶಾಂತಿ ಕೋರುತ್ತಾ, ಮೃತರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಗೌ. ಅಧ್ಯಕ್ಷರು, ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಟ್ರಸ್ಟ್‌ನ ಸರ್ವ ಸದಸ್ಯರು

ಈಶ್ವರ ವಿನಾಯಕ ಟ್ರಸ್ಟ್ (ರಿ), ದಾವಣಗೆರೆ


## ಕಾಂಗ್ರೆಸ್ ಅಭ್ಯರ್ಥಿ ಎನ್. ಕೊಟ್ರೇಶ್‌ಗೆ ಛಲವಾದಿ ಮಹಾಸಭಾದ ಬೆಂಬಲ



ಹರಪನಹಳ್ಳಿ, ಮೇ 6- ತಾಲ್ಲೂಕು ಛಲವಾದಿ ಮಹಾಸಭಾದಿಂದ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎನ್.ಕೊಟ್ರೇಶ್ ಅವರಿಗೆ ಬೆಂಬಲಿಸಲು ಈಚೆಗೆ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಈ ಕುರಿತು ಮಾಹಿತಿ ನೀಡಿದ ಛಲವಾದಿ ಯುವ ಮುಖಂಡ ಛಲವಾದಿ ಪರಶುರಾಮ ಅವರು, ವಿಜಯನಗರ ಜಿಲ್ಲಾಧ್ಯಕ್ಷ ಸೋಮಶೇಖರ ಬಣ್ಣದ ಮನೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿದ್ದು, ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚು ಮತಗಳನ್ನು ಹಾಕಿಸಿ ಜಯಶಾಲಿಯನ್ನಾಗಿ ಮಾಡಲು ತೀರ್ಮಾನಿಸಲಾಯಿತು ಎಂದು ಅವರು ಹೇಳಿದರು. ಸಭೆಯಲ್ಲಿ ಕೆಪಿಸಿಸಿ ಕಾರ್ಯದರ್ಶಿ ಉಮೇಶ ಕೂಡ್ಲಿಗಿ, ಮರಿಯಮ್ಮನಹಳ್ಳಿ ಜಯಣ್ಣ, ಹರಪನಹಳ್ಳಿ ಮಂಜುನಾಥ, ಸಮಾಜದ ಮುಖಂಡರಾದ ಸಿ. ಬಸವರಾಜ, ಸಿ. ಪ್ರತಾಪ, ಸಿ. ಚೆನ್ನಬಸಪ್ಪ, ಸಿ.ಚಂದ್ರಪ್ಪ, ನಂದಿಬೇವೂರು ಶಿವಕುಮಾರ, ರಾಗಿಮಸಲವಾಡ ಹನುಮಂತಪ್ಪ, ಬಾಗಳಿ ಬಸವರಾಜ,, ಮತ್ತಿಹಳ್ಳಿ ದುರ್ಗಪ್ಪ, ಚಿಗಟೇರಿ ರಾಕೇಶ, ನಿಟ್ಟೂರು ಗೋದೆಪ್ಪ, ನೀಲಗುಂದ ಹನುಮಂತಪ್ಪ, ಕಂಚಿಕೇರಿ ಮಂಜು, ಕುಮಾರ, ಹನುಮಂತ ಇತರರು ಉಪಸ್ಥಿತರಿದ್ದರು.

# ವಾರ ಭವಿಷ್ಯ

**ದಿನಾಂಕ : 07.05.2023 ರಿಂದ 13.05.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಕಾರ್ಮಿಕ ವರ್ಗದವರು ಯಂತ್ರೋಪಕರಣಗಳೊಂದಿಗೆ ಕೆಲಸ ಮಾಡುವ ಮೊದಲು ಹೆಚ್ಚಿನ ಸುರಕ್ಷತೆಯೊಂದಿಗಿರುವುದು ಉತ್ತಮ. ಸಂಬಂಧಗಳನ್ನು ಕಡಿದುಕೊಳ್ಳದೇ ಗಟ್ಟಿಮಾಡಿಕೊಳ್ಳುವುದು ಉತ್ತಮ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಅನಿವಾರ್ಯ ಎಂಬಂತೆ ಕರ್ತವ್ಯ ನಿಮಿತ್ತ ದೂರದೂರು ಗಳಿಗೆ ಪ್ರಯಾಣ ಮಾಡಬೇಕಾಗಬಹುದು. ಕೆಲಸ ಕಾರ್ಯಗಳಲ್ಲಿ ಮುಂದೊದಗ ಬಹುದಾದ ಅಡ್ಡಿ, ಆತಂಕಗಳ ಬಗ್ಗೆ ಮೊದಲೇ ಯೋಚಿಸುವುದು ಮೇಲು. ಆದಾಯ ತೃಪ್ತಿದಾಯಕವಾಗಲಿದೆ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನಿಮಗಾಗಿ ಅಲ್ಲದಿದ್ದರೂ ಮಕ್ಕಳಿಗೋಸ್ಕರವಾದರೂ ನಿಮ್ಮ ಗುಣ, ಸ್ವಭಾವಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದು ಉತ್ತಮ. ಹಿರಿಯರ ಹಳೇ ಕಾಯಿಲೆಗಳಿಗೆ ಉತ್ತಮ ಚಿಕಿತ್ಸೆ ದೊರೆಯಲಿದೆ. ಹೂವು-ಹಣ್ಣು ತರಕಾರಿ ವ್ಯಾಪಾರಿಗಳಿಗೆ ಉತ್ತಮ ವಹಿವಾಟಿನೊಂದಿಗೆ ಹೆಚ್ಚಿನ ಲಾಭವಾಗಲಿದೆ. ರಿಯಲ್ ಎಸ್ಟೇಟ್ ದಲ್ಲಾಳಿಗಳಿಗೆ ಕಮೀಷನ್ ಧಾರಾಳವಾಗಿ ಸಿಗಲಿದೆ. ಕೃಷಿಕರಿಗೆ ಬೇಸಾಯದಿಂದ ಲಾಭವಾಗಲಿದೆ. ಆದಾಯಕ್ಕೆ ತಕ್ಕಂತೆ ಖರ್ಚು-ವೆಚ್ಚಗಳನ್ನು ಹೊಂದಿಸಿಕೊಳ್ಳುವುದು ಮೇಲು. ಮಹಿಳೆಯರಿಗೆ ಉತ್ತಮ ದಿನಗಳು. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ರಾಜಕೀಯ ವ್ಯಕ್ತಿಗಳ ಹಿಂಬಾಲಕರಿಗೆ ಹೆಚ್ಚಿನ ಸಂಪಾದನೆಯಾಗಲಿದೆ. ನಿಮ್ಮಿಂದ ಈ ಹಿಂದೆ ಉಪಕೃತಾರಾದವರು ನಿಮಗೆ ಕೃತಜ್ಞತೆಗಳನ್ನು ಅರ್ಪಿಸಲು ಬರುವರು.ಕೈಗಾರಿಕೋದ್ಯಮಿಗಳಿಗೆ, ತೆರಿಗೆ ಮುಂತಾದ ಆಡಳಿತಾತ್ಮಕ ಅಡಚಣೆಗಳು ಎದುರಾಗಬಹುದು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸುವುದು ಉತ್ತಮ. ಹಳೇ ಕಾಯಿಲೆಯೊಂದು ಮತ್ತೆ ಮರುಕಳಿಸಿದರೂ, ಪುನಃ ತಹಬಂದಿಗೆ ಬರಲಿದೆ. ಪಕ್ಷದ ನೇತಾರರಿಂದ ಭರವಸೆಯ ಮಾತುಗಳೂ ಭರಪೂರವಾಗಿ ಕೇಳಿಬರಲಿವೆ. ಮೇಲಾಧಿಕಾರಿಗಳೊಂದಿಗೆ ಹೆಚ್ಚು ಸಂಪರ್ಕ ಹೊಂದುವಿರಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಮಾತಿನ ಚಾತುರ್ಯದಿಂದಲೇ ಎಲ್ಲಾ ಕೆಲಸಗಳನ್ನು ಸಾಧಿಸುವ ಕಲೆ ನಿಮಗೆ ಕರಗತವಾಗಲಿದೆ. ಆದರೆ ಇದು ಎಲ್ಲಾ ಕಾಲಕ್ಕೂ ಪ್ರಯೋಜನವಾಗಲಾರದು ಎಂಬುದು ನೆನಪಿರಲಿ. ಸರ್ಕಾರಿ ನೌಕರರು ತಮ್ಮ ಕರ್ತವ್ಯದಲ್ಲಿ ಯಾವುದೇ ಸಣ್ಣ-ಪುಟ್ಟ ತಪ್ಪುಗಳು ಆಗದಂತೆ ಎಚ್ಚರ ವಹಿಸುವುದು ಮೇಲು. ಇಲ್ಲವಾದಲ್ಲಿ ತಲೆದಂಡ ತೆರಬೇಕಾದೀತು.ಧನಾಗಮನವು ನಿಮ್ಮ ನಿರೀಕ್ಷೆಗೆ ತಕ್ಕಂತೆ ಇರುವುದರಿಂದ, ಹಣಕಾಸಿನ ಚಿಂತೆ ಬೇಡ. ಸಗಟು ವ್ಯಾಪಾರಿಗಳು ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು. ಗುರುಗಳನ್ನು ಆರಾಧಿಸಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಆರಂಭ ಶೂರರಾದ ನೀವು ಈ ವಾರದ ಆರಂಭದಲ್ಲಿ ಉತ್ಸಾಹ ಶಾಲಿಗಳಾಗಿದ್ದರೂ, ವಾರದ ಮಧ್ಯದಲ್ಲಿ ಅಷ್ಟೇ ಸೋಮಾರಿಗಳಾಗುವಿರಿ. ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಹೆಚ್ಚಿನ ಶ್ರಮಪಡದೇ ಗತ್ಯಂತರವಿಲ್ಲ. ಮನೆಯ ಹಿರಿಯರ ಮಧ್ಯಸ್ಥಿಕೆಯಲ್ಲಿ ವೈವಾಹಿಕ ಸಂಬಂಧವೊಂದು ಕುದುರಲಿದೆ. ನಿರುದ್ಯೋಗಿ ಪದವೀಧರರಿಗೆ ಪ್ರಭಾವಿ ವ್ಯಕ್ತಿಗಳಿಂದ ನೌಕರಿ ಸಿಗಲಿದೆ. ಸಂಶೋಧನಾ ರಂಗದಲ್ಲಿ ತೊಡಗಿಕೊಂಡವರಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ಗೋ ಸೇವೆ ಮಾಡಿ. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮನೆಯಲ್ಲಿ ನಡೆಯಲಿರುವ ಮಂಗಳ ಕಾರ್ಯಗಳಿಗೆ ಭರದ ಸಿದ್ಧತೆ ನಡೆಯಲಿದೆ.ಆತ್ಮವಿಶ್ವಾಸದೊಂದಿಗೆ ಮುನ್ನಡೆದಲ್ಲಿ ಮಾತ್ರ ಯಶಸ್ಸನ್ನು ಪಡೆಯಲು ಸಾಧ್ಯ ಎಂಬುದನ್ನು ಮರೆಯಬೇಡಿ. ಆದಾಯದ ಮೂಲದಲ್ಲಿ ಮಂದಗತಿ ಕಾಣಲಿದೆ. ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ವಿದ್ಯಾರ್ಥಿಗಳು ತಮ್ಮ ಆಲಸ್ಯತನದಿಂದಾಗಿ ಉತ್ತಮ ಫಲಿತಾಂಶಕ್ಕೆ ಮಾರಕರಾಗುವರು. ಆಸ್ತಿ ಖರೀದಿ ವಿಚಾರದಲ್ಲಿ ಮಕ್ಕಳೊಂದಿಗೆ ಚರ್ಚಿಸುವಿರಿ. ಸಾಲಗಾರರ ಕಾಟದಿಂದ ನಿಮ್ಮ ದೈನಂದಿನ ಬದುಕು ಡೋಲಾಯಮಾನವಾಗಬಹುದು. ಕುಲದೇವತಾರಾಧನೆ ಮಾಡಿ ಸೋಮ-ಬುಧ-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸಹೋದ್ಯೋಗಿಗಳೊಂದಿಗೆ ಗುಂಪಿನಲ್ಲಿ ಮಾತನಾಡುವಾಗ ಸಾಕಷ್ಟು ಎಚ್ಚರದಿಂದಿರಿ. ಇಲ್ಲವಾದಲ್ಲಿ ವೃಥಾ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾದೀತು. ಸ್ನೇಹಿತರೊಂದಿಗೆ ಒರಟು ಮಾತುಗಳು ಬೇಡ. ಆಗದಿರುವ ಕೆಲಸಗಳ ವಿಚಾರದಲ್ಲಿ ದುಸ್ಸಾಹಸಕ್ಕೆ ಕೈಹಾಕಬೇಡಿ. ನಂಬಿಯೂ ನಂಬದಂತಿರುವ ನಿಮ್ಮ ನಟನೆ ಎಲ್ಲೆಡೆ ಬಯಲಾಗಲಿದೆ. ಆರೋಗ್ಯಕ್ಕೆ ಒಗ್ಗದ ಊಟೋಪಚಾರದಿಂದಾಗಿ ಅನೇಕ ದೈಹಿಕ ಸಮಸ್ಯೆಗಳು ಎದುರಾಗಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಸಾಗಲಿದೆ. ಅನ್ನದಾನ ಮಾಡಿ ಪುಣ್ಯ ಗಳಿಸಿ. ಮಂಗಳ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಕಳೆದ ವಾರವೆಲ್ಲಾ ದುಗುಡದಿಂದಲೇ ಇದ್ದ ಮನಸ್ಸು, ಈ ವಾರ ತಹಬಂದಿಗೆ ಬರಲಿದೆ. ಶತ್ರುಗಳನ್ನು ಒತ್ತಡದ ತಂತ್ರದಿಂದಲೇ ಸರಿದಾರಿಗೆ ತರುವಿರಿ. ಆಸ್ತಿಗೆ ಸಂಬಂಧಪಟ್ಟ ವಿಚಾರಗಳು ಮಾತುಕತೆ ಮುಖಾಂತರ ಬಗೆಹರಿಯಲಿವೆ. ಕೃಷಿಕ ಮಿತ್ರರಿಗೆ ಬೇಸಾಯದಿಂದ ಹೆಚ್ಚಿನ ಲಾಭ ಬರದೇ ಹೋಗಬಹುದು. ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮದೊಂದಿಗೆ ಓದಲೇ ಬೇಕಾದ ಪ್ರಸಂಗ ಬರಲಿದೆ. ಮಂದಗತಿಯಲ್ಲಿರುವ ಆದಾಯ ನಿಮ್ಮ ಮಡದಿ, ಮಕ್ಕಳ ಕೋರಿಕೆಗಳನ್ನು ಪೂರೈಸಲು ಸಾಕಾಗದೇ, ಉಳಿತಾಯವನ್ನೂ ಕರಗಿಸಬಹುದು. ಹಿರಿಯರನ್ನು ಗೌರವಿಸಿ. ಭಾನು-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಯಾವುದೇ ಕಾರಣಕ್ಕೂ ನಿಮ್ಮ ಆತ್ಮಗೌರವಕ್ಕೆ ಧಕ್ಕೆ ತಂದುಕೊಳ್ಳ ಬೇಡಿ. ಕರ್ತವ್ಯದಲ್ಲಿ ಒತ್ತಡ ಕಂಡುಬಂದರೂ ಉತ್ತಮ ಹೆಸರು ಗಳಿಸುವಿರಿ. ರಾಜಕಾರಣಿಗಳು ಪರಸ್ಪರ ದೋಷಣೆಯಿಂದಾಗಿ ತಮ್ಮ ಘನತೆಗೆ ಧಕ್ಕೆ ತಂದುಕೊಳ್ಳುವರು. ಉನ್ನತಾಧ್ಯಯನಕ್ಕೆ ವಿದೇಶಕ್ಕೆ ಹೋಗಬಯಸುವವರಿಗೆ ಸಮಾಜದಿಂದ ಹೆಚ್ಚಿನ ನೆರವು ದೊರೆಯಲಿದೆ. ಆದರೆ ಇದು ಸದುಪಯೋಗವಾಗಬೇಕಷ್ಟೇ. ಈ ಹಿಂದೆ ಆರಂಭಿಸಿದ್ದ ಹೊಸ ಉದ್ಯಮದಲ್ಲಿ ಇನ್ನು ಮುಂದೆ ಲಾಭ ಕಾಣುವಿರಿ. ಆರಕ್ಷರಿಗೆ ಬಿಡುವಿಲ್ಲದ ಕೆಲಸವಾಗಲಿದೆ. ರುದ್ರಾಧ್ಯಾಯವನ್ನು ಪಠಿಸಿ. ಸೋಮ-ಬುಧ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ರಾಜಕಾರಣಿಗಳು ಪಕ್ಷದ ವರಿಷ್ಠರಿಗೆ ಸರಿಯಾದ ಉತ್ತರವನ್ನು ಕೊಡುವುದರಲ್ಲಿ ಹೈರಾಣಾಗುವರು. ನೀವು ಎಷ್ಟೇ ವಾಕ್ಚತುರರಾಗಿದ್ದರೂ ಕೂಡ ಮತ್ತೊಬ್ಬರನ್ನು ಸಮಾಧಾನಪಡಿಸುವುದರಲ್ಲಿ ವಿಫಲರಾಗುವಿರಿ. ಹಣಕಾಸು ಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಕೊಟ್ಟ ಸಾಲಗಳು ಮರುಪಾವತಿಯಾಗಲಿವೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿಯಾಗಲಿದೆ. ಮನೆತನದ ವಿಚಾರಕ್ಕೆ ಸಂಬಂಧಿಸಿದಂತೆ ಪೋಷಕರೊಂದಿಗೆ ವಾಗ್ವಾದ ನಡೆಯಲಿದೆ. ಹಿರಿಯರ ವ್ಯವಹಾರದಲ್ಲಿ ನಿಮಗೆ ಸಲ್ಲಬೇಕಾದ ಪಾಲು, ಖಂಡಿತಾ ಸಿಗಲಿದೆ. ಗುರುಗಳ ಸೇವೆ ಮಾಡಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಯುವಕರು ಬದುಕಿನಲ್ಲಿ ಉತ್ತಮ ಸಾಧನೆ ಮಾಡಬೇಕೆಂದರೆ, ಆತ್ಮವಿಶ್ವಾಸದೊಂದಿಗೆ ಮುನ್ನಡೆಯುವುದೊಂದೇ ದಾರಿ. ಉತ್ತಮ ನಡವಳಿಕೆ ಅನೇಕ ಸಮಸ್ಯೆಗಳನ್ನು ಬಗೆಹರಿಸಲಿದೆ. ಆಸ್ತಿ ಮಾರಾಟ ಮಾಡಿಸುವವರಿಗೆ ಹೆಚ್ಚಿನ ಲಾಭವಾಗಲಿದೆ. ಈ ವಾರ ಕ್ರೀಡಾಪಟುಗಳಿಗೆ ಉತ್ತಮ ದಿನಗಳಾಗಿದ್ದು, ಸರ್ಕಾರದಿಂದ ಅನೇಕ ಸೌಲಭ್ಯಗಳು ವಸ್ತುಗಳ ರೂಪದಲ್ಲಿ ದೊರೆಯಲಿವೆ. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿ ತಾಂತ್ರಿಕವಾಗಿ ಅಧ್ಯಯನ ಮಾಡಿದವರಿಗೆ, ಹೆಚ್ಚಿನ ಅವಕಾಶ,. ಧನಾದಾಯ ಸಾಮಾನ್ಯವಾಗಿರುವುದರಿಂದ, ಹೊಸ ಯೋಜನೆಗಳನ್ನು ಜಾರಿಗೆ ತರಲು ಯತ್ನಿಸಬೇಡಿ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ವಿನಾಕಾರಣ ಸೋದರಿಯೊಂದಿಗಿದ್ದ ವೈಮನಸ್ಯ ದೂರವಾಗಲಿದೆ. ಸಂಗೀತ ಕಲಾವಿದರಿಗೆ ವಿದೇಶದಲ್ಲಿ ಹೆಚ್ಚಿನ ಅವಕಾಶ ಸಿಗಲಿದೆ. ಪದವೀಧರರು ಕೃಷಿ ಕ್ಷೇತ್ರದಲ್ಲಿ ಆಸಕ್ತಿ ತೋರುವರು. ಅದಕ್ಕಾಗಿ ಜಮೀನಿನ ಹುಡುಕಾಟ ನಡೆಸುವರು. ಮಕ್ಕಳ ನಡಾವಳಿಯಲ್ಲಿ ಕಂಡುಬಂದ ವ್ಯತ್ಯಾಸ, ಮನೆತನದ ಗೌರವಕ್ಕೆ ಧಕ್ಕೆ ತರಲಿದೆ. ಆದ್ದರಿಂದ ಅದನ್ನು ಆರಂಭದಲ್ಲೇ ಚಿವುಟಿ ಹಾಕುವುದು ಉತ್ತಮ. ಅತಿಯಾದ ಮೋಜು-ಮಸ್ತಿಯಿಂದಾಗಿ ಆರೋಗ್ಯದಲ್ಲಿ ತೀವ್ರ ವ್ಯತ್ಯಾಸವಾಗಲಿದೆ. ಅತಿಯಾದ ಪ್ರಯಾಣಗಳನ್ನು ಮುಂದೂಡುವುದು ಲೇಸು. ಭಾನು-ಗುರು-ಶನಿ-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ:8.5.2023 ನೇ ಸೋಮವಾರ ಸಂಕಷ್ಟ ಚತುರ್ಥೀ, ಚಂದ್ರೋದಯ ರಾತ್ರಿ 9.36 ಕ್ಕೆ.**

# 13 ರಂದು ದಾವಿವಿ ಶಿವಗಂಗೋತ್ರಿಯಲ್ಲಿ ಮತ ಎಣಿಕೆ

## 14 ಟೇಬಲ್‌ಗಳಲ್ಲಿ 15-18 ಸುತ್ತುಗಳಲ್ಲಿ ಎಣಿಕೆ ಕಾರ್ಯ : ಜಿಲ್ಲಾಧಿಕಾರಿ ಶಿವಾನಂದ ಕಾಪಶಿ



ದಾವಣಗೆರೆ, ಮೇ 6 - ರಾಜ್ಯ ವಿಧಾನಸಭೆ ಚುನಾವಣೆ ಮತದಾನವು ಮೇ 10 ರಂದು ನಡೆಯಲಿದ್ದು ಮತ ಎಣಿಕೆ ಮೇ 13 ರ ಶನಿವಾರ ನಡೆಯ ಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿ ಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಅವರು ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯ ತುಂಗಭದ್ರ ಸಭಾಂಗಣದಲ್ಲಿ ಮತ ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರಿಗೆ ಏರ್ಪಡಿಸಲಾದ ತರಬೇತಿಯಲ್ಲಿ ಭಾಗವಹಿಸಿ ಸಿಬ್ಬಂದಿಗಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಿದರು.

ಜಿಲ್ಲೆಯ 7 ಕ್ಷೇತ್ರಗಳ ಮತ ಎಣಿಕೆಯು ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿಯಲ್ಲಿ ಮೇ 13 ರಂದು ಬೆಳಗ್ಗೆ 8 ಗಂಟೆಯಿಂದ ನಡೆಯಲಿದೆ. ಚುನಾವಣಾ ಎಣಿಕೆಗೆ ಪ್ರತಿ ಕ್ಷೇತ್ರಕ್ಕೆ 14 ಟೇಬಲ್‌ಗಳಲ್ಲಿ ಎಣಿಕೆ ನಡೆಯಲಿದ್ದು 15 ರಿಂದ 18 ಸುತ್ತುಗಳ ವರೆಗೆ ಎಣಿಕೆ ನಡೆಯಲಿದೆ.

ಚುನಾವಣೆಗೆ ನಿಯೋಜಿತ ರಾದ ಸೆಕ್ಟರ್ ಅಧಿಕಾರಿಗಳೇ ಎಣಿಕೆ ಮೇಲ್ವಿ ಚಾರಕರಾಗಿರು ವುದರಿಂದ ಇನ್ನಷ್ಟು ಸರಳವಾಗಿ ರುತ್ತದೆ. ಪ್ರತಿ ಸುತ್ತಿನ ಎಣಿಕೆಯ ವೇಳೆ ಕಂಟ್ರೋಲ್ ಯುನಿಟ್ ಪರಿಶೀಲಿಸಿ ಮತಗಟ್ಟೆಗೆ ನೀಡಲಾದ ಸಂಖ್ಯೆಗಳನ್ನು ಪರಿಶೀಲಿಸಿ ಕೊಂಡು ಮತಗಟ್ಟೆ ಸಂಖ್ಯೆ ಮತ್ತು ಕಂಟ್ರೋಲ್ ಯುನಿಟ್‌ಗೆ ಹೊಂದಾಣಿಕೆ ಯಾಗುವುದನ್ನು ಖಾತರಿಪಡಿಸಿಕೊಳ್ಳ ಬೇಕು. ಕೆಲವು ಸಂದರ್ಭಗಳಲ್ಲಿ 1 ಹಾಗೂ 7 ಸಂಖ್ಯೆ ಬರೆಯುವಾಗ ಗೊಂದಲವಾಗದಂತೆ ಸ್ಪಷ್ಟವಾಗಿ ಕಾಣುವಂತೆ ಬರೆಯ ಬೇಕೆಂದು ತಿಳಿಸಿ ದರು. ಎಲ್ಲಾ ಎಣಿಕೆಯ ಸಂಪೂರ್ಣ ಉಸ್ತುವಾರಿಯನ್ನು ಚುನಾವಣಾ ವೀಕ್ಷಕರು ವಹಿಸಲಿದ್ದು, ಎಲ್ಲಾ ಅನುಮತಿಯನ್ನು ವೀಕ್ಷಕರಿಂದ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಮಾತನಾಡಿ ಎಣಿಕೆ ಸಂದರ್ಭದಲ್ಲಿ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿಕೊಳ್ಳಬೇಕು.

ಮತದಾನ ಮುಕ್ತಾಯವಾದಾಗ ಎಷ್ಟು ಮತಗಳಿದ್ದವು ಎನ್ನುವುದು ನಮೂನೆ-17ಸಿ ನಲ್ಲಿ ಇರುತ್ತದೆ. ಕಂಟ್ರೋಲ್ ಯುನಿಟ್‌ನಲ್ಲಿನ ಮತಗಳಿಗೂ ನಮೂನೆಯಲ್ಲಿ ನಮೂದಿಸಿರುವ ಮತಗಳಿಗೂ ತಾಳೆಯಾಗಬೇಕು. ಈ ಬಗ್ಗೆ ಅಭ್ಯರ್ಥಿಗಳ ಪರವಾಗಿ ಬಂದಿರುವ ಏಜೆಂಟರಿಗೂ ತಿಳಿಸಬೇಕೆಂದರು ಮತ್ತು ವಿವಿ ಪ್ಯಾಟ್ ಸ್ಲಿಪ್‌ಗಳ ಎಣಿಕೆಯನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 5 ಮಷಿನ್‌ಗಳ ಎಣಿಕೆಯನ್ನು ಮಾಡಲಾಗುತ್ತದೆ ಎಂದು ಪ್ರಾಯೋಗಿಕವಾಗಿ ಎಣಿಕೆ ಪ್ರಕ್ರಿಯೆಗಳ ಬಗ್ಗೆ ತಿಳಿಸಿಕೊಟ್ಟರು.

ಈ ವೇಳೆ ಮಾಯಕೊಂಡ, ಚನ್ನಗಿರಿ ಚುನಾವಣಾ ವೀಕ್ಷಕರಾದ ದೇಬಾಶಿಸ್ ದಾಸ್ ಹಾಗೂ ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಚುನಾವಣಾಧಿಕಾರಿಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳು ಉಪಸ್ಥಿತರಿದ್ದರು.

## ನಾಳೆ ಸಂಜೆಯಿಂದ ನಿಷೇಧಾಜ್ಞೆ ಸಭೆ, ಧ್ವನಿವರ್ಧಕ ಬಳಕೆ ನಿಷೇಧ

ದಾವಣಗೆರೆ, ಮೇ 6- ಇದೇ ದಿನಾಂಕ 10 ರ ಬುಧವಾರ ಮತದಾನ ನಡೆಯಲಿದ್ದು, ಈ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಹಾಗೂ ಮತದಾನ ಪ್ರಕ್ರಿಯೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ನಾಡಿದ್ದು ದಿನಾಂಕ 8 ರ ಸೋಮವಾರ ಸಂಜೆ 6 ಗಂಟೆಯಿಂದ ಇದೇ ದಿನಾಂಕ 11 ರ ಗುರುವಾರ ಸಂಜೆ 6 ಗಂಟೆಯವರೆಗೆ ಜಿಲ್ಲೆಯಾದ್ಯಂತ 144ನೇ ಸೆಕ್ಷನ್ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿ ಶಿವಾನಂದ ಕಾಪಶಿ ಆದೇಶಿಸಿದ್ದಾರೆ.

ನಿಷೇಧಾಜ್ಞೆಯ ಅವಧಿಯಲ್ಲಿ ಇದೇ ದಿನಾಂಕ 10 ರಂದು ಮತದಾನ ಕೇಂದ್ರಗಳಿಗೆ ಮತ ಹಾಕಲು ಬರುವ ಮತದಾರರನ್ನು ಹೊರತುಪಡಿಸಿ ಉಳಿದಂತೆ, ಮತದಾನ ನಡೆಯುವ ಪ್ರದೇಶದಲ್ಲಿ 5 ಜನರಿಗಿಂತ ಹೆಚ್ಚಿನ ವ್ಯಕ್ತಿಗಳು ಗುಂಪುಗೂಡುವಂತಿಲ್ಲ, ಒಟ್ಟಾಗಿ ಓಡಾಡುವಂತಿಲ್ಲ ಹಾಗೂ ಕಾನೂನು ಬಾಹಿರ ಚಟುವಟಿಕೆಗಳನ್ನು ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸುವುದನ್ನು ನಿಷೇಧಿಸಿದೆ. ಯಾವುದೇ ಸಂಘಟನೆಗಳು, ರಾಜಕೀಯ ಪಕ್ಷಗಳು, ಧಾರ್ಮಿಕ ಪಂಗಡಗಳು ಮೆರವಣಿಗೆ ಹಾಗೂ ಪ್ರತಿಭಟನೆ ಮಾಡುವಂತಿಲ್ಲ.

ನಿಷೇಧಾಜ್ಞೆಯ ಈ ಅವಧಿಯಲ್ಲಿ ಧ್ವನಿವರ್ಧಕಗಳನ್ನು ಉಪಯೋಗಿಸಲು ಅನುಮತಿ ಇರುವುದಿಲ್ಲ. ನಿಷೇಧಾಜ್ಞೆಯು ಶವ ಸಂಸ್ಕಾರ, ಮದುವೆ, ಧಾರ್ಮಿಕ ಆಚರಣೆ ನಡೆ ಸಲು ಹಾಗೂ ದೇವಸ್ಥಾನ, ಚರ್ಚ್ ಹಾಗೂ ಮಸೀದಿಗಳಿಗೆ ಪ್ರಾರ್ಥನೆಗೆ ತೆರಳುವವರಿಗೆ ಹಾಗೂ ಇನ್ನಿತರೆ ಸಮಾರಂಭಗಳನ್ನು ನಡೆ ಸಲು ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದುಕೊಂಡವರಿಗೆ ಈ ಆದೇಶದಿಂದ ವಿನಾ ಯಿತಿ ಇರುತ್ತದೆ ಎಂದು ಅವರು ತಿಳಿಸಿದ್ದಾರೆ.

## ಬಗೆಹರಿದ ವಿಷಯ ಕೆದಕುವುದನ್ನು ಒಪ್ಪಲಾಗದು : ಸುಪ್ರೀಂ ಕೋರ್ಟ್

ನವದೆಹಲಿ, ಮೇ 6 - ಬಗೆಹರಿದ ವಿಷಯಗಳನ್ನು ಪದೇ ಪದೇ ಕೆದಕುವುದನ್ನು ಯಾವುದೇ ಕಾನೂನು ವ್ಯವಸ್ಥೆ ಒಪ್ಪಲಾಗದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ವಿಷಯ ಬಗೆಹರಿದ ಮೇಲೆ ಮತ್ತೆ ಅದೇ ವಿಷಯ ಪ್ರಸ್ತಾಪಿಸುವುದು ಸಮಯದ ಸಂಪೂರ್ಣ ಪೋಲು ಎಂದು ನ್ಯಾಯಾಲಯ ಹೇಳಿದೆ.

ವ್ಯಕ್ತಿಯೊಬ್ಬರನ್ನು ಸೇವೆಯಿಂದ ಉಚ್ಚಾಟಿಸಲಾಗಿತ್ತು. ಈ ಕುರಿತ ಅರ್ಜಿಯನ್ನು 2004ರಲ್ಲಿ ಇತ್ಯರ್ಥಪಡಿಸಲಾಗಿತ್ತು. ಮತ್ತೆ ಅದೇ ವಿಷಯದ ಮರು ಪರಿಶೀಲನೆಗೆ ಅರ್ಜಿ ದಾಖಲಿಸಿದಾಗ ತಿರಸ್ಕರಿಸಿದ ನ್ಯಾಯಾಲಯ, 10 ಸಾವಿರ ರೂ.ಗಳ ದಂಡ ವಿಧಿಸಿದೆ.

ನ್ಯಾಯಮೂರ್ತಿಗಳಾದ ಎಸ್. ಕೆ. ಕೌಲ್ ಹಾಗೂ ಅರವಿಂದ ಕುಮಾರ್ ಅವರನ್ನು ಒಳಗೊಂಡ ಪೀಠ ಈ ಕುರಿತು ಆದೇಶ ಹೊರಡಿಸಿದೆ.

ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲು ಸಂವಿಧಾನದ 32ನೇ ವಿಧಿಯ ಮೂಲಕ ಹಕ್ಕು ನೀಡಲಾಗಿದೆ.

ಈ ಹಕ್ಕಿನ ಅನ್ವಯ ತಮ್ಮ ವಿಷಯ ಮರು ಪರಿಶೀಲಿಸಬೇಕು ಎಂದು ಅರ್ಜಿದಾರರು ಮನವಿ ದಾಖಲಿಸಿದ್ದರು.

## ಪ್ರಧಾನಿ ರೋಡ್ ಶೋ ನಿಲ್ಲಿಸಲಿ : ಕಾಂಗ್ರೆಸ್

ನವದೆಹಲಿ, ಮೇ 6 – ಪ್ರಧಾನ ಮಂತ್ರಿ ನರೇಂದ್ರ ಮೋದಿ ವಾಸ್ತವ ತಿರುಚುವುದರಲ್ಲಿ ಪರಿಣಿತಿ ಹೊಂದಿದ್ದಾರೆ. ಬೃಹತ್ ಪ್ರದರ್ಶನ ನೀಡುವುದರಲ್ಲಿ ಅವರಿಗೆ ಆಸಕ್ತಿ ಇದೆಯೇ ಹೊರತು, ತಮ್ಮ ರೋಡ್ ಶೋನಿಂದ ಜನರಿಗೆ ಆಗುತ್ತಿರುವ ಸಮಸ್ಯೆ ಪರಿಗಣಿಸುವುದಿಲ್ಲ ಎಂದು ಕಾಂಗ್ರೆಸ್ ದೂರಿದೆ. ರೋಡ್ ಶೋ ಕಾರಣದಿಂದ ಉಂಟಾದ ಅಸ್ತವ್ಯಸ್ತತೆಯಿಂದಾಗಿ ಆಂಬ್ಯುಲೆನ್ಸ್‌ಗಳು ಸ್ಥಗಿತಗೊಂಡಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆರೋಪಿಸಿದ್ದಾರೆ. ಎರಡನೇ ದಿನದ ರೋಡ್ ಶೋ ಅನ್ನು ರದ್ದುಗೊಳಿಸಬೇಕು ಎಂದವರು ಒತ್ತಾಯಿಸಿದ್ದಾರೆ. ಶನಿವಾರ ಬೆಂಗಳೂರಿನಲ್ಲಿ ಪ್ರಧಾನಿ ಮೋದಿ ರೋಡ್ ಶೋ ನಡೆಸಿದ್ದರು. ಭಾನುವಾರವೂ ರೋಡ್ ಶೋ ನಡೆಯಲಿದೆ.

## ಖರ್ಗೆ ಹತ್ಯೆಗೆ ಬಿಜೆಪಿ ಅಭ್ಯರ್ಥಿಯ ಸಂಚು

**ಸುರ್ಜೇವಾಲಾ ಆರೋಪ**

ಬೆಂಗಳೂರು, ಮೇ 6 - ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಹಾಗೂ ಅವರ ಕುಟುಂಬದವರ ಹತ್ಯೆಗೆ ಬಿಜೆಪಿ ಅಭ್ಯರ್ಥಿ ಸಂಚು ನಡೆಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದ್ದಾರೆ.

ಬಿಜೆಪಿಯ ಚಿತ್ತಾಪುರ ಅಭ್ಯರ್ಥಿ ಮಣಿಕಂಠ ರಾಠೋಡ್ ಅವರದ್ದು ಎನ್ನಲಾದ ಆಡಿಯೋ ಒಂದನ್ನು ಪತ್ರಿಕಾಗೋಷ್ಠಿಯಲ್ಲಿ ಹಂಚಿಕೊಂಡಿರುವ ಸುರ್ಜೇವಾಲಾ, ಖರ್ಗೆ, ಪತ್ನಿ ಹಾಗೂ ಮಕ್ಕಳ ಹತ್ಯೆ ಮಾಡುವುದಾಗಿ ರಾಥೋಡ್ ಹೇಳಿದ್ದಾರೆ ಎಂದಿದ್ದಾರೆ.

ಕರ್ನಾಟಕ ರಾಜಕೀಯದಲ್ಲಿ ಹತ್ಯೆ ಸಂಚು ಸೇರಿಕೊಂಡಿದೆ. ಇದು ರಾಜಕೀಯದ ರಸಾತಳ ಎಂದವರು ಆರೋಪಿಸಿದರು.

ಈ ಕುರಿತು ಮಾತನಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನಾವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುತ್ತೇವೆ. ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

## ಭಾರತೀಯ ವಾಯುಪಡೆಯ ಧ್ರುವ ಹೆಲಿಕಾಪ್ಟರ್ ಕಾರ್ಯನಿರ್ವಹಣೆ ಸ್ಥಗಿತ

ನವದೆಹಲಿ, ಮೇ 6 - ಜಮ್ಮು ಮತ್ತು ಕಾಶ್ಮೀರದಲ್ಲಿ ಧ್ರುವ ಹೆಲಿಕಾಪ್ಟರ್ ಪತನಗೊಂಡ ನಂತರ, ಭಾರತೀಯ ವಾಯುಪಡೆಯ ಎಲ್ಲಾ ಆಧುನಿಕ ಹಗುರ ಧ್ರುವ ಹೆಲಿಕಾಪ್ಟರ್‌ಗಳ ಕಾರ್ಯನಿರ್ವಹಣೆ ನಿಲ್ಲಿಸಲಾಗಿದೆ.

ಕಿಶ್ತವರ್ ಜಿಲ್ಲೆಯಲ್ಲಿ ಹೆಲಿಕಾಪ್ಟರ್ ಕುಸಿದ ನಂತರ ಅದರಲ್ಲಿದ್ದ ತಾಂತ್ರಿಕ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದರು. ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಎ.ಎಲ್.ಹೆಚ್. ಧ್ರುವದ ಎಲ್ಲಾ ಹೆಲಿಕಾಪ್ಟರ್‌ಗಳನ್ನು ಸ್ಥಗಿತಗೊಳಿಸಲಾಗಿದೆ.

ಇದೇ ರೀತಿಯ ಎರಡು ಘಟನೆಗಳು ನಡೆದ ನಂತರ ನೌಕಾ ದಳ ಹಾಗೂ ಕರಾವಳಿ ಗಾರ್ಡ್‌ಗಳು ತಮ್ಮ ಧ್ರುವ ಹೆಲಿಕಾಪ್ಟರ್‌ಗಳನ್ನು ಸ್ಥಗಿತಗೊಳಿಸಿದ್ದವು. ಇವುಗಳ ತಾಂತ್ರಿಕ ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಭಾರತೀಯ ವಾಯುಪಡೆಯು 70 ಎ.ಎಲ್.ಹೆಚ್. ಧ್ರುವ ಹೆಲಿಕಾಪ್ಟರ್‌ಗಳನ್ನು ಹೊಂದಿದೆ.

## ಪಾಕ್‌ನಲ್ಲಿ ಖಲಿಸ್ತಾನಿ ಉಗ್ರ ಪಂಜ್ವಾರ್ ಹತ್ಯೆ

ನವದೆಹಲಿ, ಮೇ 6 – ಪಾಕಿಸ್ತಾನದ ಲಾಹೋರ್‌ನಲ್ಲಿ ಗುರುತಿಸಲಾಗದ ಇಬ್ಬರು ಬಂದೂಕುಧಾರಿಗಳು ಖಲಿಸ್ತಾನಿ ಉಗ್ರವಾದಿ ಪರಮ್‌ಜಿತ್ ಸಿಂಗ್ ಪಂಜ್ವಾರ್ ಹೊಡೆದುರುಳಿಸಿದ್ದಾರೆ.

63 ವರ್ಷದ ಪಂಜ್ವಾರ್, ನಿಷೇಧಿತ ಖಲಿಸ್ತಾನಿ ಕಮಾಂಡೋ ಫೋರ್ಸ್ - ಪಂಜ್ವಾರ್ ಮುಖ್ಯಸ್ಥನಾಗಿದ್ದ. ಆತ ಮಾದಕ ಹಾಗೂ ಶಸ್ತ್ರಗಳ ಕಳ್ಳಸಾಗಣೆ ಸೇರಿದಂತೆ, ಹಲವು ಉಗ್ರವಾದಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದ. ಅಕ್ರಮ ಚಟುವಟಿಕೆ ನಿಷೇಧ ಕಾಯ್ದೆ ಅನ್ವಯ 2020ರ ಜುಲೈನಲ್ಲಿ ಭಾರತ ಸರ್ಕಾರ ಆತನನ್ನು ಉಗ್ರವಾದಿ ಎಂದು ಘೋಷಿಸಿತ್ತು.

ಪಂಜ್ವಾರ್ ತನ್ನ ಗಾರ್ಡುಗಳ ಜೊತೆ ಪಾರ್ಕ್ ಒಂದಕ್ಕೆ ತೆರಳಿದ್ದ ಸಂದರ್ಭದಲ್ಲಿ ಗುಂಡಿಟ್ಟು ಹೊಡೆದುರುಳಿಸಲಾಗಿದೆ.

ಭಾರತದ ಪಂಜಾಬ್‌ನ ತರ್ನ್ ತಾರಣ್ ಜಿಲ್ಲೆಯಲ್ಲಿ ಜನಿಸಿದ್ದ ಪಂಜ್ವಾರ್, 1986ರಲ್ಲಿ ಖಲಿಸ್ತಾನಿ ಸಂಘಟನೆ ಸೇರಿದ್ದ. ನಂತರ ಆತ ಪಾಕಿಸ್ತಾನಕ್ಕೆ ತೆರಳಿದ್ದ. ಕಳೆದ ಕೆಲ ವರ್ಷಗಳಿಂದ ಆತ ನಿಷ್ಕ್ರಿಯನಾಗಿದ್ದನಾದರೂ, ಪಾಕಿಸ್ತಾನದ ಯುವಕರಿಗೆ ಬಂದೂಕಿನ ತರಬೇತಿ ನೀಡುತ್ತಿದ್ದ. ಭಾರತದಲ್ಲಿ ನುಸುಳುವಿಕೆ ಹಾಗೂ ದಾಳಿಗಳಿಗೆ ಕುಮ್ಮಕ್ಕು ನೀಡುತ್ತಿದ್ದ.

# ರಾಜಧಾನಿಯ ಬೃಹತ್ ರೋಡ್ ಶೋ

## ಹತ್ತಾರು ಕ್ಷೇತ್ರಗಳ ಸಂಪರ್ಕಿಸಿದ ಪ್ರಧಾನಿ ಮೋದಿ ಯಾತ್ರೆ





ಬೆಂಗಳೂರು, ಮೇ 6 – ರಾಜ್ಯ ವಿಧಾನಸಭಾ ಚುನಾವಣೆಗೆ ಕೇವಲ ನಾಲ್ಕು ದಿನಗಳಿರುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ಬೃಹತ್ ರೋಡ್ ಶೋ ನಡೆಸಿದ್ದಾರೆ. 26 ಕಿ.ಮೀ. ರೋಡ್ ಶೋ ಉದ್ದಕ್ಕೂ ಇಕ್ಕೆಲಗಳಲ್ಲಿ ಜನರು ಸೇರಿದ್ದರು.

ಬೆಂಗಳೂರು ದಕ್ಷಿಣದ ಆರ್.ಬಿ.ಐ. ಮೈದಾನದಿಂದ ಆರಂಭವಾದ ರೋಡ್ ಶೋ, ಮಲ್ಲೇಶ್ವರಂನಲ್ಲಿರುವ ಸ್ಯಾಂಕಿ ಟ್ಯಾಂಕಿವರೆಗೆ ಸಾಗಿ ಬಂದಿತು. ಮೂರು ಗಂಟೆಗಳ ಕಾಲ ರೋಡ್ ಶೋ ನಡೆಯಿತು.

ದಕ್ಷಿಣ ಹಾಗೂ ಮಧ್ಯ ಬೆಂಗಳೂರಿನ ಹಲವಾರು ಭಾಗಗಳ ಮೂಲಕ ಸಾಗಿದ ರೋಡ್ ಶೋ, ಸುಮಾರು ಡಜನ್ ವಿಧಾನಸಭಾ ಕ್ಷೇತ್ರಗಳನ್ನು ಸಂಪರ್ಕಿಸಿತು.

ಪ್ರಧಾನಿ ಮೋದಿ ಜೊತೆ ಬೆಂಗಳೂರು ದಕ್ಷಿಣದ ಸಂಸದ ತೇಜಸ್ವಿ ಸೂರ್ಯ ಹಾಗೂ ಬೆಂಗಳೂರು ಸೆಂಟ್ರಲ್ ಸಂಸದ ಪಿ.ಸಿ. ಮೋಹನ್ ಅವರಿದ್ದರು.

ವಿಶೇಷವಾಗಿ ರೂಪಿಸಲಾದ ವಾಹನದ ಮೇಲಿದ್ದ ಮೋದಿ, ರಸ್ತೆಗಳ ಇಕ್ಕೆಲಗಳು ಹಾಗೂ ಕಟ್ಟಡಗಳ ಮೇಲೆ ನಿಂತಿದ್ದ ಜನರತ್ತ ಕೈ ಬೀಸಿದರು. ನೆರೆದಿದ್ದ ಜನರು ಮೋದಿ - ಮೋದಿ, ಜೈ ಭಜರಂಗ ಬಲಿ, ಭಾರತ್ ಮಾತಾ ಕಿ ಜೈ ಮುಂತಾದ ಘೋಷಣೆ ಕೂಗಿದರು. ಹಲವು ಸ್ಥಳಗಳಲ್ಲಿ ಹಬ್ಬದಂತಹ ವಾತಾವರಣ ಉಂಟಾಗಿತ್ತು.


ಹಲವು ಜನರು ರೋಡ್ ಶೋ ಹಾದು ಹೋಗುವಾಗ ಹೂವುಗಳನ್ನು ಎರಚಿದರು. ಪ್ರಧಾನಿ ಸಹ ವಾಹನಗಳ ಮೇಲಿದ್ದ ಹೂವನ್ನು ಜನರ ಕಡೆ ಎಸೆದರು.

ರೋಡ್ ಶೋ ಮಾರ್ಗದ ಉದ್ದಕ್ಕೂ ಬಿಜೆಪಿ ಧ್ವಜಗಳನ್ನು ಹಾರಿಸಲಾಗಿತ್ತು. ಸಾವಿರಾರು ಕಾರ್ಯಕರ್ತರು ಕೇಸರಿ ಶಾಲು ಹಾಗೂ ಟೋಪಿಗಳನ್ನು ಧರಿಸಿದ್ದರು. ಹಲವೆಡೆ ಹನುಮಂತ ದೇವರ ಮುಖವಿರುವ ಭಗವಾ ಧ್ವಜಗಳು ಕಂಡು ಬಂದವು.

ರೋಡ್ ಶೋ ಹಿನ್ನೆಲೆಯಲ್ಲಿ ವ್ಯಾಪಕ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ನಾಳೆ ಭಾನುವಾರದಂದು ತಿಪ್ಪಸಂದ್ರದಲ್ಲಿರುವ ಕೆಂಪೇಗೌಡ ಪ್ರತಿಮೆಯಿಂದ ಟ್ರಿನಿಟ್ ಸರ್ಕಲ್‌ವರೆಗೆ 10 ಕಿ.ಮೀ. ಉದ್ದದ ಸಣ್ಣ ರೋಡ್ ಶೋ ಆಯೋಜಿಸಲಾಗಿದೆ.

## ರಾಷ್ಟ್ರೀಯ ಪಕ್ಷಗಳಿಗೆ ನಾನೇ ಪೈಪೋಟಿ : ಹೆಚ್.ಪಿ.ರಾಜೇಶ್



**ಜಗಳೂರು**

ಜಗಳೂರು, ಮೇ 6- ಎರಡೂ ರಾಷ್ಟ್ರೀಯ ಪಕ್ಷಗಳ ಮಧ್ಯೆ ಪೈಪೋಟಿ ನಡೆಯಬೇಕಿತ್ತು. ಆದರೆ ಇಲ್ಲಿ ಅವರಿಬ್ಬರೂ ಒಂದಾಗಿದ್ದು, ನೇರ ಹಣಾಹಣಿ ನನ್ನ ಮಧ್ಯೆ ಇದೆ. ರಾಷ್ಟ್ರೀಯ ಪಕ್ಷಗಳಿಗೆ ನಾನೇ ಪೈಪೋಟಿ ನೀಡಿರುವೆ. ಇದು ಗೆಲುವಿನ ಉತ್ಸಾಹ ಹೆಚ್ಚಿಸಿದೆ ಎಂದು ಮಾಜಿ ಶಾಸಕ, ಪಕ್ಷೇತರ ಅಭ್ಯರ್ಥಿ ಹೆಚ್.ಪಿ. ರಾಜೇಶ್ ಹೇಳಿದ್ದಾರೆ.

ತಾಲ್ಲೂಕಿನ ಬಿದರಕೆರೆ ತೋಟದ ಮನೆ ಆವರಣದಲ್ಲಿ ಸ್ವಾಭಿಮಾನಿ ಪಕ್ಷೇತರ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನನಗೆ ಸ್ವಾಭಿಮಾನಿಗಳ ಶಕ್ತಿಯೇ ಪ್ರಣಾಳಿಕೆಗಳು. ನಿಮ್ಮ ತೀರ್ಮಾನಕ್ಕೆ ಬದ್ದನಾಗಿರುವೆ. ಕ್ಷೇತ್ರಕ್ಕೆ ಉತ್ತಮ ವ್ಯಕ್ತಿತ್ವವುಳ್ಳ ಶಾಸಕನ ಅಗತ್ಯವಿದೆ. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಆರಂಭದಿಂದ ದೇಣಿಗೆಯೊಂದಿಗೆ ಕ್ಷೇತ್ರದ ಸ್ವಾಭಿಮಾನಿಗಳ ವ್ಯಾಪಕ ಬೆಂಬಲ ಗೆಲುವಿನ ಉತ್ಸಾಹ ಹೆಚ್ಚಿಸಿದೆ ಎಂದರು.

ನನ್ನ ಆಡಳಿತಾವಧಿಯಲ್ಲಿ ಕ್ಷೇತ್ರದಲ್ಲಿನ ಜನತೆಗೆ ಗಂಗಾಕಲ್ಯಾಣ, ಸೂರು, ಗ್ರಾಮೀಣ ಭಾಗದಲ್ಲಿನ ಸಿಸಿ ರಸ್ತೆ, ಅಭಿವೃದ್ದಿ ಕಾಮಗಾರಿಗಳೇ ನನಗೆ ಗೆಲುವಿನ ಶ್ರೀರಕ್ಷೆಯಾಗಿದೆ. ಪ್ರತಿ ಗ್ರಾಮಗಳಲ್ಲಿ ಅಪಾರ ಬೆಂಬಲ ಸ್ವಾಗತ ಕಂಡು ಮೂಕವಿಸ್ಮಿತನಾಗಿದ್ದೇನೆ. ವದಂತಿಗಳಿಗೆ ಕಿವಿಗೊಡದೆ ಮೇ 10 ರವರೆಗೆ ಇದೇ ಬೆಂಬಲವಿರಲಿ ಎಂದರು.

ಮೇ 8ರಂದು ಉಚ್ಛಾಯ ಎಳೆಯೋಣ. ಭರದಿಂದ ಸಾಗುತ್ತಿರುವ ಸ್ವಾಭಿಮಾನದ ರಥಕ್ಕೆ ಯಾರೇ ಅಡ್ಡಿಪಡಿಸಿದರೂ ನಿಷ್ಠೆಯಿಂದ ಎಳೆದು ಪಾದಗಟ್ಟೆಗೆ ತಲುಪಿಸಿ ಎಂದು ರಾಜೇಶ್ ಮನವಿ ಮಾಡಿದರು.

ನನಗೆ ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಸಿಗುವಲ್ಲಿ ಮೋಸವಾಗಿದೆ. ಈ ಬಗ್ಗೆ ಕೇಳಿದರೆ ಬಿ.ಫಾರಂ ನೀಡಿದ ವರಿಷ್ಠರಲ್ಲಿಯೇ ಉತ್ತರವಿಲ್ಲ. ಕ್ಷೇತ್ರದ ಜನತೆಯ ಆಶೀರ್ವಾದದಿಂದ ಗೆದ್ದು ಬರುವೆ. ನಂತರ ಸಭೆ ಕರೆದು ಯಾವ ಪಕ್ಷ ಸೇರಬೇಕು ಎಂಬುದನ್ನು ತಮ್ಮ ನಿರ್ಧಾರದಂತೆ ನಡೆದುಕೊಳ್ಳುವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಗುರುಸಿದ್ದನಗೌಡ್ರು ಅವರ ಪುತ್ರರಾದ ಟಿ.ಜಿ. ಅರವಿಂದ್ ಗೌಡ, ಟಿ.ಜಿ. ಪವನ್, ಮುಖಂಡರಾದ ತಿಪ್ಪೇಸ್ವಾಮಿಗೌಡ, ಪುರುಷೋತ್ತಮ ನಾಯ್ಕ, ಯು.ಜಿ.ಶಿವಕುಮಾರ್, ಗಿರೀಶ್ ಒಡೆಯರ್, ಕುಬೇಂದ್ರಪ್ಪ, ಆನಂದರಾಜ್, ಎಸ್.ಕೆ.ರಾಮರೆಡ್ಡಿ , ಹಜರತ್‌ಅಲಿ, ಎಲ್.ಬಿ. ಭೈರೇಶ್, ದೇವರಾಜ್, ಸೂರಲಿಂಗಪ್ಪ, ಎಂ.ಎಸ್. ಪಾಟೀಲ್ ಮುಂತಾದವರು ಇದ್ದರು.


**ಸುಸಜ್ಜಿತ ಕೊಠಡಿಗಳು ಬಾಡಿಗೆಗೆ ಲಭ್ಯವಿರುತ್ತವೆ**

ನಗರದ ವನಿತಾ ಸಮಾಜ ವತಿಯಿಂದ ನಡೆಯುತ್ತಿರುವ

**'ವಾತ್ಸಲ್ಯ' ನಿಲಯದಲ್ಲಿ**

ಹಿರಿಯ ಮಹಿಳೆಯರಿಗಾಗಿ ಈ ಕೆಳಕಂಡ ಸೌಲಭ್ಯಗಳಿರುವ ಸುಸಜ್ಜಿತ ಕೊಠಡಿಗಳು ಬಾಡಿಗೆಗೆ ಲಭ್ಯವಿರುತ್ತವೆ.

- **24 ಗಂಟೆಗಳ ನೀರಿನ ವ್ಯವಸ್ಥೆ ಇರುತ್ತದೆ.**
- **ಅಡುಗೆ ಮಾಡಿಕೊಳ್ಳಲು ಅವಕಾಶವಿರುತ್ತದೆ.**
- **ಅಟ್ಯಾಚ್ ಬಾತ್ ರೂಮ್ ಇರುತ್ತದೆ.**

ವಾರ್ಡನ್ ಮತ್ತು ಸೆಕ್ಯೂರಿಟಿ ಇತ್ಯಾದಿ ಅನುಕೂಲ ವ್ಯವಸ್ಥೆ ಇರುವ ನಗರದ ಮಧ್ಯಭಾಗದಲ್ಲಿರುವ ಹಿರಿಯ ವನಿತೆಯರ ವಸತಿ ನಿಲಯ ಕೆಲವೇ ಕೆಲವು ಕೊಠಡಿಗಳು ಲಭ್ಯವಿರುತ್ತವೆ.

**ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು.**


ಆಸಕ್ತರು ಸಂಪರ್ಕಿಸ ಬೇಕಾಗಿರುವ ದೂರವಾಣಿ :

**99805 21025, 94481 66666**

'ವಾತ್ಸಲ್ಯ' ಹಿರಿಯ ವನಿತೆಯರ ವಸತಿ ನಿಲಯ, 7ನೇ ಅಡ್ಡ ರಸ್ತೆ, 4ನೇ ಮುಖ್ಯ ರಸ್ತೆ, ಎಂ.ಸಿ.ಸಿ. ಕಾಲೋನಿ, 'ಸಿ' ಬ್ಲಾಕ್, ದಾವಣಗೆರೆ-04

## ಪದವಾಣಿ-64

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.




**ಎಡದಿಂದ ಬಲಕ್ಕೆ :**

| | |
|---|---|
| 2) ಮನೆಯ ಹಿಂದಿನ ಜಾಗ | 3 |
| 4) ಮರದಲ್ಲಿರುವ ಸಿಹಿ ಉಲ್ಟಾ ಆಗಿದೆ | 3 |
| 5) ದೇವರ ಮಂಗಳ ಸ್ನಾನ | 4 |
| 6) ಅವಯವಗಳಿಂದ ಕೂಡಿರುವುದು | 4 |
| 8) ಖನಿಜಗಳ ನೆಲೆ | 2 |
| 10) ನಗರದಲ್ಲಿರುವ ಮನುಷ್ಯ | 2 |
| 13) ಎಡೆಬಿಡದೆ ಸುರಿಯುವ ಮಳೆ | 4 |
| 14) ಸಿನಿಮಾಗೆ ಸಂಬಂಧಪಟ್ಟ ಪತ್ರಿಕೆ | 4 |
| 15) ಮೂರಕ್ಷರದ ಕೆನ್ನೆ | 3 |
| 16) ಬಡವ-ಸ್ತ್ರೀಲಿಂಗ ರೂಪ | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಶಾರದೆಯ ಅನುಗ್ರಹಕ್ಕೆ ಪಾತ್ರನಾದವನಿಗೆ ಸೂಕ್ತ ಹೆಸರು | 6 |
| 2) ಶೀತ ವಲಯದಲ್ಲಿ ವಾಸಿಸುವ ಜಿಂಕೆ | 5 |
| 3) ವಿರೋಧ ಹೀಗೆ ಆಗಿದೆ | 3 |
| 5) ಕೊನೆ-ಪರ್ಯಾಯ ಪದ | 4 |
| 7) ಹಂಪಿಯ ಪುರಾತನ ಹೆಸರು | 6 |
| 9) ಅರಸ ಪತ್ನಿ ಸಮೇತ ಮೇಲೇರಿದ್ದಾನೆ | 4 |
| 11) ಹರಿಹರನಿಗೆ ಸಂದ ಬಿರುದು | 5 |
| 12) ಕಪಟಿ ಮಾಡಿದ ಮೋಸ | 3 |




(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 63ರ ಉತ್ತರಗಳು :**

**ಎಡದಿಂದ ಬಲಕ್ಕೆ :** 2) ಆಕ್ರೋಶ 5) ನೀಲಿನಕ್ಷೆ 6) ಪಂಚತಂತ್ರ 7) ರಕ್ತಸ್ರಾವ 9) ರಸಪಾಕ 11) ಕಲಕೇತ 12) ಹಾಲಾಹಲ

**ಮೇಲಿನಿಂದ ಕೆಳಕ್ಕೆ :** 1)ರಜನೀಕರ 2) ಆಕಾಂಕ್ಷೆ 3) ಶರಪಂಜರ 4) ಸುಮಿತ್ರ 8) ವಸಂತಮಾಸ 10) ಕಡಲತೀರ 11) ಕರಾಟೆ 12) ಹಾವುಗೆ.

# ರಾಜಕಾರಣಕ್ಕೆ ಹೊಸ ಭಾಷ್ಯ ಬರೆದ, ನಮ್ಮವರೀಗ ಮತ್ತೆ ನೆನಪಾಗುತ್ತಾರೆ...

1984ರ ಅಕ್ಟೋಬರ್ ತಿಂಗಳಿನಲ್ಲಿ ಆಗ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆ ಚಿತ್ರದುರ್ಗಕ್ಕೆ ಭೇಟಿ ನೀಡಿದ್ದರು. ದುರ್ಗದಲ್ಲಿ ವಾಸವಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪನವರನ್ನು ಭೇಟಿಯಾಗಲು ಬಯಸಿ, ಎಸ್. ಆರ್. ಬೊಮ್ಮಾಯಿ, ದೇವೇಗೌಡ ಒಳಗೊಂಡ ಐದಾರು ಜನ ಮಂತ್ರಿಗಳು ಹೋಗುತ್ತಾರೆ. ಮನೆಯ ವರಾಂಡದಲ್ಲಿ ಸಚಿವರಿಗೆ ಕುರ್ಚಿಗಳನ್ನು ಹಾಕಿ ಕೂರಿಸಲಾಯಿತು.

ಮೊದಲಿಗೆ ಹೆಗಡೆ ಅವರನ್ನು ಒಳಗೆ ಕರೆದ ನಿಜಲಿಂಗಪ್ಪನವರು ಅವರ ಬಳಿ ಮಾತನಾಡಿ, ಕಾಫಿ ನೀಡಿ ಸತ್ಕರಿಸಿದರು. ನಂತರ ಒಂದು ಬಾರಿಗೆ ನಾಲ್ವರಂತೆ ಒಳ ಕರೆದು ಕಾಫಿ ಕೊಟ್ಟರು. ಇದೇಕೆ ಹೀಗೆ ಎಂದು ನಿಮಗೆ ಆಶ್ಚರ್ಯವಾಗುತ್ತದೆಯೇ! ಅವರ ಮನೆಯಲ್ಲಿ ಇದ್ದದ್ದು ಕೇವಲ ನಾಲ್ಕೇ ನಾಲ್ಕು ಕಾಫಿ ಕಪ್‌ಗಳಂತೆ.!

ಒಮ್ಮೆ ಹೆಗಡೆಯವರು ನಿಜಲಿಂಗಪ್ಪನವರಿಗೆ ದೂರವಾಣಿ ಮೂಲಕ ಕರೆ ಮಾಡುತ್ತಾರೆ. ಆದರೆ ಅವರ ಸಂಪರ್ಕ ದೊರಕುತ್ತಿಲ್ಲ. ಕಾರಣ ಏನೆಂದು ಪರಿಶೀಲಿಸಿ ತಿಳಿಸಿ ಎಂದು ಚಿತ್ರದುರ್ಗದ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ಬರುತ್ತದೆ. ಕಾರಣ ಹುಡುಕಲಾಗಿ ನಿಜಲಿಂಗಪ್ಪನವರ ಮನೆಯ ಟೆಲಿಫೋನ್ ಸಂಪರ್ಕ ಕಡಿತಗೊಳಿಸಲಾಗಿದೆ.ಏತಕ್ಕಾಗಿ ಗೊತ್ತೇ? ಬಹಳ ತಿಂಗಳಿಂದ ನಿಜಲಿಂಗಪ್ಪನವರ ಮನೆಯ ಟೆಲಿಫೋನ್ ಬಿಲ್ 40 ರೂ. ಬಾಕಿ ಇದೆ . ಆದ್ದರಿಂದ ನಿಯಮಾನುಸಾರ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ಬಾಕಿ ಬಿಲ್ಲು ಮತ್ತು ಪುನರ್ ಸಂಪರ್ಕ ಶುಲ್ಕವಾಗಿ 25 ಒಟ್ಟು 65 ರೂಪಾಯಿಗಳನ್ನು ಪಾವತಿಸಿದರೆ ತಕ್ಷಣವೇ ಸಂಪರ್ಕವನ್ನು ಮರು ಚಾಲನೆಗೊಳಿಸಲಾಗುವುದು ಎಂಬ ಮಾಹಿತಿಯನ್ನು ಟೆಲಿಫೋನ್ ಅಧಿಕಾರಿಗಳು ಪೊಲೀಸ್ ವರಿಷ್ಠಾಧಿಕಾರಿಗಳಿಗೆ ತಿಳಿಸುತ್ತಾರೆ.

ಇದನ್ನು ತಿಳಿದ ಆ ಪೊಲೀಸ್ ವರಿಷ್ಠಾಧಿಕಾರಿ ತಕ್ಷಣ ತನ್ನ ಸ್ವಂತ ಹಣದಿಂದ 65 ರೂಪಾಯಿಗಳನ್ನು ದೂರ ವಾಣಿ ಇಲಾಖೆಗೆ ಜಮಾ ಆಗುವಂತೆ ಮಾಡಿ ದೂರವಾಣಿ ಸಂಪರ್ಕಕ್ಕೆ ಮರುಜೀವ ಬರುವಂತೆ ಮಾಡುತ್ತಾರೆ. ಇದರಿಂದ ಮುಖ್ಯಮಂತ್ರಿಗಳು ನಿಜಲಿಂಗಪ್ಪನವರೊಂದಿಗೆ ಕರೆ ಮಾಡಿ ಮಾತನಾಡಲು ಸಾಧ್ಯವಾಗುತ್ತದೆ.

ನಿಜಲಿಂಗಪ್ಪನವರಿಗೆ ತಮ್ಮ ಮನೆಯ ದೂರವಾಣಿ ಸಂಪರ್ಕ ಪುನರಾರಂಭವಾಗಿದ್ದು ಕಂಡು ಆಶ್ಚರ್ಯವಾಗುತ್ತದೆ. ಅವರು ತಮ್ಮ ಮನೆಯ ಸನಿಹವಿದ್ದ ನರಸಿಂಹಮೂರ್ತಿ ಎನ್ನುವವರ ಮೂಲಕ ಟೆಲಿಫೋನ್ ಎಕ್ಸ್‌ಚೇಂಜ್ ನಲ್ಲಿ ವಿಚಾರಿಸಲಾಗಿ ಜಿಲ್ಲಾ ಎಸ್ಪಿಯವರು ಟೆಲಿಫೋನ್ ಬಿಲ್ಲನ್ನು ತುಂಬಿರುವ ವಿಷಯ ತಿಳಿಯುತ್ತದೆ.

ಅವರು ಮರುದಿನವೇ ಎಸ್‌ಪಿ ಅವರನ್ನು ತಮ್ಮ ಮನೆಗೆ ಆಹ್ವಾನಿಸುತ್ತಾರೆ. ಆ ಎಸ್ಪಿ ಬೇರೆ ಯಾರೂ ಅಲ್ಲ, ಶಂಕರ ಬಿದರಿ. ಮರುದಿನ ಬೆಳಿಗ್ಗೆ ಬಿದರಿಯವರು ನಿಜಲಿಂಗಪ್ಪನವರ ಮನೆಗೆ ಬಂದಾಗ, 'ನನಗೆ ದೂರವಾಣಿ ಸಂಪರ್ಕದ ಅವಶ್ಯಕತೆ ಇರದ ಕಾರಣ ಉದ್ದೇಶ ಪೂರ್ವಕವಾಗಿ ಬಿಲ್ ತುಂಬಿರಲಿಲ್ಲ. ಈಗ ನೀವು ಮತ್ತೆ ಟೆಲಿಫೋನ್ ಸಂಪರ್ಕ ಪುನರಾರಂಭವಾಗುವಂತೆ ಮಾಡಿದ್ದೀರಿ. ಆಯಿತು, ಏನೂ ತಪ್ಪಿಲ್ಲ, ನೀವು ಮುಂದಿನ ತಿಂಗಳು ಮೊದಲ ವಾರದಲ್ಲಿ ಮತ್ತೆ ನಮ್ಮ ಮನೆಗೆ ಬನ್ನಿ. ನೀವು ತುಂಬಿರುವ ಹಣವನ್ನು ನಾನು ಮರಳಿಸುತ್ತೇನೆ ಎನ್ನುತ್ತಾರೆ.

ಈ ಘಟನೆಯಿಂದ ನಿಜಲಿಂಗಪ್ಪನವರ ನಿಕಟ ಸಂಪರ್ಕ ಬಿದರಿಯವರಿಗೆ ಹೆಚ್ಚಾಗುತ್ತದೆ.ಅವರಿಂದ, ಅವರ ವಕೀಲ ವೃತ್ತಿ, ಸ್ವಾತಂತ್ರ್ಯ ಸಂಗ್ರಾಮ ಹಾಗೂ ರಾಜಕೀಯ ಜೀವನದ ಹಲವಾರು ಘಟನೆಗಳನ್ನು ತಿಳಿಯಲು ಸಾಧ್ಯವಾಯಿತು ಎನ್ನುತ್ತಾರೆ ಶಂಕರ್ ಬಿದರಿ.

ಇಂತಹುದೇ ಸರಳ, ಸುಂದರ ಬದುಕು ಬದುಕಿದವರು ಸ್ವಾತಂತ್ರ್ಯ ಹೋರಾಟಗಾರರು, ವಕೀಲರು, ಮಾಜಿ ಮುಖ್ಯ ಮಂತ್ರಿಗಳು ಆಗಿದ್ದ ಕಡಿದಾಳ ಮಂಜಪ್ಪನವರು. ಸಮಾಜ ವಾದಿ ಸಿದ್ಧಾಂತದ ಶಾಂತವೇರಿ ಗೋಪಾಲಗೌಡರು. ರೈತರ ಪರವಾಗಿ ನಡೆಸಿದ ಸಾಮಾಜಿಕ ಹೋರಾಟ ಒಂದು ಹೊಸ ಬೆಳಕನ್ನು ನೀಡಿತಲ್ಲದೆ ನಂತರ ಅದರ ಪ್ರಭಾವದಿಂದ ಹಲವಾರು ಮುಖ್ಯಮಂತ್ರಿಗಳು, ಸಾಹಿತಿಗಳು ಸಮಾಜ ಮುಖಿಯಾಗಿ ಕೆಲಸ ಮಾಡಲು ಕಾರಣವಾಯಿತು.

ಎಲ್ಲರವ ನಮ್ಮಣ್ಣ ಇಮ್ಮಣ್ಣ ಎಂದೇ ಹೆಸರಾದ ಜಗಳೂರಿನ ಜೆ.ಎಂ. ಇಮಾಮ್ ಅವರು ಜಗಳೂರಿನಲ್ಲಿ ತಮಗಿದ್ದ ಬಂಗಲೆಯನ್ನು ಖಾಸಗಿ ಕಾಲೇಜಿಗೆ ಬಿಟ್ಟುಕೊಟ್ಟು, ಅಲ್ಲೇ ಪಕ್ಕದಲ್ಲಿ ಚಿಕ್ಕಕೋಣೆಯೊಂದರಲ್ಲಿ ಸರಳಾತಿ ಸರಳವಾಗಿ ಬದುಕು ಸವೆಸಿದವರು. ನಾನು ಆ ಕಾಲೇಜಿನ ವಿದ್ಯಾರ್ಥಿಯಾಗಿ ಅವರೊಂದಿಗೆ ನಲಿದಾಡಿದ ಕ್ಷಣಗಳು ಜೀವಮಾನದಲ್ಲಿ ಮರೆಯಲಾಗದು. ನೆನಪು ಮಾಡಿಕೊಂಡರೆ ಇಂತಹ, ಇಂತವರ ನೂರಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಕಾಣ ಸಿಗಬಲ್ಲವು.

ನಮಗೆ ಅರಿವಿರಲಿ. ಇಂತವರ ಸಂತತಿ ಹೆಚ್ಚ ಬೇಕಿದೆ. ಅದು ಸಾಧ್ಯವಾಗುವುದು ಮತದಾರ ಜಾಗೃತನಾದಾಗ ಮಾತ್ರ. ಇಲ್ಲದಿದ್ದಲ್ಲಿ ಹಣ, ಹೆಂಡ, ಆಮಿಷ, ಜಾತಿ, ಅಧಿಕಾರ, ಭ್ರಷ್ಟಾಚಾರ, ದರ್ಪ, ದೌಲತ್ತು, ಅನ್ಯಾಯ, ಅನೀತಿಗಳು ನಮ್ಮನ್ನು ಆಳಬಲ್ಲವು. ಉನ್ನತ ಆದರ್ಶ, ಚಿಂತನೆಗಳನ್ನು ಹೊಂದಿದ ವ್ಯಕ್ತಿಯನ್ನು ಆಯ್ಕೆ ಮಾಡಿದಾಗ ನಾವು ಉನ್ನತ, ಉತ್ತಮ ಸಮಾಜವನ್ನು ಹೊಂದಲು ಸಾಧ್ಯ. ಬೇವು ಬಿತ್ತಿ ಮಾವು ಬೆಳೆಯಬಹುದೇ ಅಯ್ಯಾ ಎನ್ನುವ ಶರಣರ ಮಾತಿನಂತೆ, ಚುನಾವಣೆಯ ಈ ಸುಸಂದರ್ಭದಲ್ಲಿ ಉತ್ತಮ ಆಯ್ಕೆ ಎಂಬ ಮಾವು ಬಿತ್ತುವ ಹಕ್ಕು, ಕರ್ತವ್ಯ, ಹೊಣೆಗಾರಿಕೆ ನಮ್ಮ ನಮ್ಮ ಹೆಗಲ ಮೇಲಿದೆ ಎಂಬುದನ್ನು ನಾವು ಮರೆಯದಿರೋಣ.



- ಎನ್. ಟಿ. ಎರ್ರಿಸ್ವಾಮಿ, ಜಗಳೂರು.

## ಹಣ ಕೊಟ್ಟು ಓಟು ಕೇಳುವ ಅನೈತಿಕ ಸಂಸ್ಕೃತಿ ನಮ್ಮದಲ್ಲ: ಕಾಂ. ಭಾರತಿ



ದಾವಣಗೆರೆ, ಮೇ 6- ಚುನಾವಣಾ ಪ್ರಚಾರಕ್ಕೆ ಶ್ರೀಮಂತರಿಂದ ದುಡ್ಡು ಬೇಡುವುದಿಲ್ಲ. ಜನಸಾಮಾನ್ಯರೇ ನಮ್ಮ ಕಾರ್ಮಿಕ ಪಕ್ಷದ ಚಟುವಟಿಕೆಗೆ ಹಣ ನೀಡಿ ಬೆಂಬಲಿಸಬೇಕು. ಇಷ್ಟು ವರ್ಷಗಳ ಕಾಲ ನಮ್ಮ ಪಕ್ಷದ ಪ್ರತಿಯೊಂದು ಹೋರಾಟ, ಇತರೆ ಕಾರ್ಯಕ್ರಮಗಳು ಜನ ಸಾಮಾನ್ಯರಿಂದ ಪಡೆದ ದೇಣಿಗೆ ಹಣದಿಂದಲೇ ನಡೆದುಕೊಂಡು ಬಂದಿವೆ. ಚುನಾವಣೆಯು ಕೂಡ ಒಂದು ಹೋರಾಟವೇ ಆಗಿದೆ ಎಂದು ಎಸ್.ಯು.ಸಿ.ಐ (ಕಮ್ಯುನಿಸ್ಟ್) ಪಕ್ಷದ ಅಭ್ಯರ್ಥಿ ಕಾಂ. ಕೆ. ಭಾರತಿ ತಿಳಿಸಿದ್ದಾರೆ ಹಣ ಕೊಟ್ಟು ಓಟು ಕೇಳುವ ಅನೈತಿಕ ಸಂಸ್ಕೃತಿ ನಮ್ಮ ಪಕ್ಷದ್ದಲ್ಲ. ಹಾಗಾಗಿ ವೋಟು ಕೊಡಿ, ನೋಟು ಕೊಡಿ ಅಭಿಯಾನದೊಂದಿಗೆ ಚುನಾವಣಾ ಪ್ರಚಾರ ಆರಂಭಿಸಿದ್ದು, ಜನಸಾಮಾನ್ಯರಿಂದ ಅದ್ಭುತ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಭಾರತಿ ತಿಳಿಸಿದ್ದಾರೆ

## ಕಾಂಗ್ರೆಸ್ ಎಸ್ಟಿ ನಗರ ಘಟಕದ ಅಧ್ಯಕ್ಷರಾಗಿ ರಾಯದುರ್ಗದ ಮಂಜುನಾಥ



**ಹರಪನಹಳ್ಳಿ**

ಹರಪನಹಳ್ಳಿ, ಮೇ 6- ಪಟ್ಟಣದ ವಾಲ್ಮೀಕಿ ನಗರದ ದೊಡ್ಡಗರಡಿಕೇರಿಯ ರಾಯದುರ್ಗದ ಮಂಜುನಾಥ ಅವರನ್ನು ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ ಅವರ ಶಿಫಾರಸ್ಸಿನ ಮೇರೆಗೆ, ಕಾಂಗ್ರೆಸ್ ಪರಿಶಿಷ್ಟ ಪಂಗಡದ ನಗರ ಘಟಕದ ಅಧ್ಯಕ್ಷರನ್ನಾಗಿ ಮಾಡಿ ಕೆಪಿಸಿಸಿ ಸಮಿತಿಯ ಪರಿಶಿಷ್ಟ ಪಂಗಡದ ರಾಜ್ಯಘಟಕದ ಅಧ್ಯಕ್ಷ ಕೆ.ಪಿ. ಪಾಲಯ್ಯ ನೇಮಕ ಮಾಡಿದ್ದಾರೆ.

## ಕೊಕ್ಕನೂರಿನಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ



ಮಲೇಬೆನ್ನೂರು, ಮೇ 6- ಕೊಕ್ಕನೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮತದಾನದ ಮಹತ್ವ ಕುರಿತು ಪ್ರತಿಜ್ಞಾ ವಿಧಿಯನ್ನು ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಗ್ರಾಮಸ್ಥರಿಗೆ ಬೋಧಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಈ ಹಿಂದೆ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ 76.11ರಷ್ಟು ಮತದಾನ ಮಾಡಲಾಗಿತ್ತು. ಈ ಬಾರಿ ಚುನಾವಣೆಯಲ್ಲಿ ಎಲ್ಲರೂ ನೂರಕ್ಕೆ ನೂರರಷ್ಟು ಮತದಾನ ಮಾಡುವುದರ ಮೂಲಕ ಪ್ರಜಾಪ್ರಭುತ್ವವನ್ನು ಬಲಗೊಳಿಸೋಣ ಎಂದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿಯ ಎಸ್‌ಡಿಎ ಸುರೇಶ್, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರಯ್ಯ ಮತ್ತು ಇತರರು ಭಾಗವಹಿಸಿದ್ದರು.

## ಜಗಳೂರಿನಲ್ಲಿ ಮತದಾನ ಜಾಗೃತಿ ಕಾರ್ಯಕ್ರಮ



ಜಗಳೂರು, ಮೇ 6- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀ ಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಜಗಳೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮತದಾನ ಸಾಕ್ಷರತಾ ಕ್ಲಬ್, ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸಹಯೋಗ ದೊಂದಿಗೆ ಮತದಾನ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶು ಪಾಲರಾದ ಡಾ. ರಾಜೇಶ್ವರಿ ಪೂಜಾರ್ ಮತದಾನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದರು.

ಕಾಲೇಜಿನ ಐ.ಕ್ಯೂ.ಎ.ಸಿ. ಘಟಕದ ಸಂಚಾಲಕರಾದ ಶ್ರೀಮತಿ ಸಲ್ಮಾತಾಜ್ ಮತದಾನದ ಮಹತ್ವದ ಕುರಿತು ತಿಳಿಸಿದರು. ಯುವ ಪರಿವರ್ತಕ ರಮೇಶ್.ಜಿ ಮತದಾನ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

## ಕೊಕ್ಕನೂರಿನಲ್ಲಿ ಸಿಐಎಸ್‌ಎಫ್ ಪಥಸಂಚಲನ



ಮಲೇಬೆನ್ನೂರು, ಮೇ 6- ವಿಧಾನ ಸಭಾ ಚುನಾವಣೆ ಅಂಗವಾಗಿ ಕೊಕ್ಕನೂರು ಗ್ರಾಮದಲ್ಲಿ ಮಲೇಬೆನ್ನೂರು ಪೊಲೀಸ್ ಠಾಣೆಯ ಸಹಯೋಗ ದೊಂದಿಗೆ ಸಿಐಎಸ್‌ಎಫ್ ಯೋಧರು ಪಥಸಂಚಲನ ನಡೆಸಿದರು. ಈ ಸಂದರ್ಭದಲ್ಲಿ ರಾಜಾ ವೀರ ಮದಕರಿ ನಾಯಕ ಸಂಘದ ಯುವಕರು ಯೋಧರಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಗೌರವ ಸಲ್ಲಿಸಿ ಕುಡಿಯಲು ನೀರಿನ ಬಾಟಲ್ ಹಾಗೂ ಬಿಸ್ಕೆಟ್ ಕೊಟ್ಟು ಜೈ ಹಿಂದ್ ಘೋಷಣೆಯೊಂದಿಗೆ ಬೀಳ್ಕೊಟ್ಟರು.

## 36ನೇ ವಾರ್ಡ್‌ನಲ್ಲಿ ಉತ್ತರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು 36ನೇ ವಾರ್ಡ್ ನಿಟ್ಟುವಳ್ಳಿ, ಲೆನಿನ್ ನಗರ ವ್ಯಾಪ್ತಿಯಲ್ಲಿ ಇಂದು ಬಿರುಸಿನ ಮತ ಪ್ರಚಾರ ನಡೆಸಿದರು. ಈ ವೇಳೆ ತೆರೆದ ವಾಹನದಲ್ಲಿ ಮತ ಯಾಚಿಸುವಾಗ, ವಾರ್ಡ್ ನ ಮುಖಂಡರು, ಪ್ರಮುಖರು ನಾಗರಾಜ್ ಲೋಕಿಕೆರೆ ಅವರನ್ನು ಸ್ವಾಗತಿಸಿ, ಬೆಂಬಲ ಸೂಚಿಸಿದರು. ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕರಾದ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ದೂಡಾ ಮಾಜಿ ಅಧ್ಯಕ್ಷ ಕೆ.ಎಂ. ಸುರೇಶ್, ಜೊಳ್ಳಿ ಗುರು ಸೇರಿದಂತೆ ವಾರ್ಡ್ ನ ಪ್ರಮುಖರು, ಪಕ್ಷದ ಮುಖಂಡರು, ಕಾರ್ಯಕರ್ತರು ಸಾಥ್ ನೀಡಿದ್ದರು.


## ವಾಯುವಿಹಾರಿಗಳತ್ತ ನಾಗರಾಜ್ ಚಿತ್ತ

ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಪ್ರತಿ ದಿನವೂ ಮುಂಜಾನೆಯೇ ವಾಯುವಿಹಾರಿಗಳ ಭೇಟಿ ಮಾಡಿ ಅವರೊಂದಿಗೆ ಬೆರೆತು ಮತಯಾಚಿಸುತ್ತಾ ಗಮನ ಸೆಳೆಯುತ್ತಿದ್ದಾರೆ.

ವಿವಿಧ ಉದ್ಯಾನವನಗಳು, ಕುಂದವಾಡ ಕೆರೆ ಮತ್ತು ಟಿವಿ ಸ್ಟೇಷನ್ ಕೆರೆ ಸೇರಿದಂತೆ ವಿವಿಧ ಕಡೆಗಳಲ್ಲಿನ ವಾಯು ವಿಹಾರಿಗಳನ್ನು, ಟೀ, ಕಾಫೀ ಸವಿಯುವ ಸ್ಥಳಗಳಲ್ಲಿ ಭೇಟಿ ಮಾಡಿ ಆತ್ಮೀಯವಾಗಿ ಕುಶಲೋಪರಿ ವಿಚಾರಿಸುವ ಮೂಲಕ ಮತ ಯಾಚಿಸಿದರು.

ಮುಂಜಾನೆ ಬಿಜೆಪಿ ಮುಖಂಡರು, ಕಾರ್ಯಕರ್ತರು, ಪ್ರಮುಖರು, ಯುವ ಮೋರ್ಚಾ ಕಾರ್ಯಕರ್ತರ ಜೊತೆ ಗೂಡಿ ತಾವೂ ವಾಯು ವಿಹಾರ ಮಾಡುತ್ತಾ ವಾಯು ವಿಹಾರಕ್ಕೆ ಬರುವ ಹಿರಿಯ ನಾಗರಿಕರ ಆಶೀರ್ವಾದ ಪಡೆದು ನಮ್ರತೆಯಿಂದ ಮತ ಯಾಚಿಸಿದರು.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯರಾದ ಶಿಲ್ಪಾ ಜಯಪ್ರಕಾಶ್, ಮುಖಂಡರುಗಳಾದ ಮಂಜುನಾಥ್ ಡಿ ಬಿಳಿಚೋಡು, ಉಮೇಶ್ ಎಲವಟ್ಟಿ, ಟಿ.ಎಂ. ಉಮಾಪತಯ್ಯ, ವಿ.ಟಿ. ಹನುಮೇಗೌಡ, ಬಿ. ಆನಂದ್, ಉಮೇಶ್, ಆಲೂರು ಜಯಣ್ಣ, ಕೊಟ್ರೇಶಣ್ಣ, ಚೇತನ್ ಕನ್ನಡಿಗ ಸೇರಿದಂತೆ ಇತರರು ಮತ ಪ್ರಚಾರ ನಡೆಸಿದರು.



## ದಾವಣಗೆರೆ ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪರ ಪುತ್ರ ಅಭಿ ಪ್ರಚಾರ



ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ ಪುತ್ರ ಅಭಿ ನಾಗರಾಜ್ ಲೋಕಿಕೆರೆ ಅವರು ತಂದೆ ಪರ ಮತ ಪ್ರಚಾರ ನಡೆಸಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಡಿಸಿಎಂ ಟೌನ್ ಶಿಪ್, ರಾಜೇಂದ್ರ ಬಡಾವಣೆ ಮತ್ತು ವಿವಿಧ ಬಡಾವಣೆಗಳಲ್ಲಿ ಹಾಗೂ ಸಂಜೆ ಆಂಜನೇಯ ಬಡಾವಣೆಯಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ತಂಡದ ಜೊತೆಗೂಡಿ ಮತದಾರರ ಪ್ರತಿ ಮನೆಗಳಿಗೆ ಭೇಟಿ ನೀಡಿ ಮನೆ ಮನೆ ಸಂಪರ್ಕ ನಡೆಸಿ, ತಂದೆ ನಾಗರಾಜ್ ಲೋಕಿಕೆರೆ ಅವರನ್ನು ಬೆಂಬಲಿಸುವಂತೆ ಕೇಳಿಕೊಂಡರು.

ಮತದಾರರ ಬಳಿ ತೆರಳಿದಾಗ, ಯುವ ಮೋರ್ಚಾ ತಂಡವು ನಾಗರಾಜ್ ಲೋಕಿಕೆರೆ ಅವರ ಪುತ್ರ ಅಭಿ ಅವರನ್ನು ಪರಿಚಯಿಸಿ, ಸಮಾಜ ಸೇವಕರಾಗಿ ಅನೇಕ ಆಟೋ ಚಾಲಕರಿಗೆ ಆಟೋ ಕೊಡಿಸಿ ಬದುಕು ಕಟ್ಟಿಕೊಳ್ಳಲು ದಾರಿ ಮಾಡಿಕೊಟ್ಟಿದ್ದು ಮತ್ತು ಕೋವಿಡ್ ಸಮಯದಲ್ಲಿ ಆಹಾರ ಕಿಟ್ ನೀಡಿ ಜನರ ಸಂಕಷ್ಟಕ್ಕೆ ನೆರವಾಗಿದ್ದು ಹಾಗೂ ಕೇಂದ್ರ, ರಾಜ್ಯ ಸರ್ಕಾರಗಳ ಜನಪರ ಸಾಧನೆ ತಿಳಿಸಿದರು.

ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಕಿಶೋರ್, ಅರವಿಂದ್, ಕಿರಣ್, ರಮೇಶ್ ಸೇರಿದಂತೆ ಯುವ ಮೋರ್ಚಾ ತಂಡ ಸಾಥ್ ನೀಡಿತು.

## ಹರಿಹರದಲ್ಲಿ ಹರೀಶ್ ಗೆಲುವು ಎಷ್ಟು ಸತ್ಯವೋ ರಾಜ್ಯದಲ್ಲಿ ಪುನಃ ಬಿಜೆಪಿ ಸರ್ಕಾರ ಬರುವುದು ಅಷ್ಟೇ ಸತ್ಯ

### ಮಲೇಬೆನ್ನೂರಿನಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ವಿಶ್ವಾಸ




ಮಲೇಬೆನ್ನೂರು, ಮೇ 6- ಡಂಬಲ್ ಇಂಜಿನ್ ಸರ್ಕಾರಗಳ ಸಾಧನೆಗಳನ್ನು ಸಾಮಾನ್ಯ ಜನರು ಮೆಚ್ಚಿದ್ದು, ಈ ಬಾರಿಯೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬರುವುದು ನಿಶ್ಚಿತ ಎಂದು ಸಂಸದ ಜಿ. ಎಂ.ಸಿದ್ದೇಶ್ವರ ವಿಶ್ವಾಸ ವ್ಯಕ್ತಪಡಿಸಿದರು.

ಅವರು ಶನಿವಾರ ಮಲೇಬೆನ್ನೂರು ಪಟ್ಟಣದಲ್ಲಿ ಹರಿಹರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ಪಿ.ಹರೀಶ್ ಅವರ ಪರವಾಗಿ ರೋಡ್ ಶೋ ಮೂಲಕ ಮತ ಯಾಚನೆ ಮಾಡಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ದೇಶ ಜಗತ್ತಿನ ಗಮನ ಸೆಳೆದಿದ್ದು, ದೇಶದಲ್ಲಿ ಹಿಂದೆಂದೂ ಆಗದಂತಹ ಅಭಿವೃದ್ಧಿ ಯೋಜನೆಗಳು ಮೋದಿ ಅವರ ಅವಧಿಯಲ್ಲಿ ಆಗಿರುವುದನ್ನು ದೇಶ ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದೆ. ರಾಜ್ಯದಲ್ಲೂ ಯಡಿಯೂರಪ್ಪ ಮತ್ತು ಈಗಿನ ಸಿಎಂ ಬಸವರಾಜ ಬೊಮ್ಮಾಯಿ ಅವರು ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ, ಒಳ ಮೀಸಲಾತಿ ಸೇರಿದಂತೆ, ಮಹತ್ತರ ಕೆಲಸಗಳನ್ನು ಮಾಡಿದ್ದಾರೆ. ಜೊತೆಗೆ ಬಡ ಜನರ ಪರ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಿದ್ದಾರೆ. ಹಾಗಾಗಿ ಈ ಚುನಾವಣೆಯಲ್ಲಿ ಹರಿಹರದಲ್ಲಿ ಬಿ.ಪಿ.ಹರೀಶ್ ಅವರ ಗೆಲುವು ಎಷ್ಟು ಸತ್ಯವೋ ರಾಜ್ಯದಲ್ಲಿ ಪುನಃ ಬಿಜೆಪಿ ಸರ್ಕಾರ ಬರುವುದು ಅಷ್ಟೇ ಸತ್ಯವಾಗಿದ್ದು, ಹರೀಶ್ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಿ ಎಂದು ಸಂಸದರು ಮನವಿ ಮಾಡಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಹಿರಿಯ ಮುಖಂಡ ಸಿರಿಗೆರೆ ನಾಗನಗೌಡ್ರು ಮಾತನಾಡಿ, ಈ ಬಾರಿ ಹರೀಶ್ ಅವರನ್ನು ಪಕ್ಷಾತೀತವಾಗಿ ಜನ ಆಯ್ಕೆ ಮಾಡಲಿದ್ದಾರೆ ಎಂದರು.

ಬಿಜೆಪಿ ಅಭ್ಯರ್ಥಿ ಬಿ.ಪಿ.ಹರೀಶ್ ಮಾತನಾಡಿ, ಕ್ಷೇತ್ರದಲ್ಲಿ ನಾವು 3ನೇ ಸುತ್ತಿನ ಪ್ರಚಾರ ನಡೆಸುತ್ತಿದ್ದು, ಜನ ಇನ್ನಿಲ್ಲದ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಜನರ ಈ ಪ್ರೀತಿ, ಅಭಿಮಾನಕ್ಕೆ ಸದಾ ಚಿರಋಣಿಯಾಗಿರುತ್ತೇನೆಂದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಪ್ರಧಾನ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಹುಗ್ಗಿ ಮಹಾಂತೇಶ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ವನಜಾಕ್ಷಿಬಾಯಿ ಕೃಷ್ಣನಾಯ್ಕ, ಮುಖಂಡರಾದ ಕೆ.ಜಿ. ವೀರನಗೌಡ್ರು, ಮುದೇಗೌಡ್ರ ತಿಪ್ಪೇಶ್, ಪುರಸಭೆ ಸದಸ್ಯ ರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜು ನಾಥ್, ಓ.ಜಿ.ಕುಮಾರ್, ಭೋವಿ ಮಂಜಣ್ಣ, ನ್ಯಾಯಬೆಲೆ ಅಂಗಡಿ ಮಂಜಣ್ಣ, ಪಾನಿಪುರಿ ರಂಗನಾಥ್, ಹುಳ್ಳಳ್ಳಿ ಸಿದ್ದೇಶ್, ಸುಬ್ಬಿ ರಾಜಣ್ಣ, ತಳಸದ ಸಂತೋಷ್, ಕೊಮಾರನಹಳ್ಳಿ ಉಜ್ಜೇಶ್, ಜಿಗಳಿ ಹನುಮಗೌಡ ಮತ್ತಿತರರು ಪಾಲ್ಗೊಂಡಿದ್ದರು.

# ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪ್ರಚಾರಕ್ಕೆ ಹಿರಿಯರು, ಮುಖಂಡರು, ಕಾರ್ಯಕರ್ತರ ಸಾಥ್



**ಬೇತೂರು, ಕಲಪನಹಳ್ಳಿ, ಚಿತ್ತಾನಹಳ್ಳಿ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಮತ ಯಾಚನೆ**

ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಬಿರುಸಿನ ಪ್ರಚಾರ ನಡೆಸಿದರು.

ಪಕ್ಷದ ಹಿರಿಯರು, ಮುಖಂಡರು, ಪ್ರಮುಖರು, ಕಾರ್ಯಕರ್ತರ ಜೊತೆಗೂಡಿ ಬೇತೂರು ಗ್ರಾಮದಲ್ಲಿನ ಶ್ರೀ ಆಂಜನೇಯ ದೇವಸ್ಥಾನದಿಂದ ಬೇತೂರು ಗ್ರಾಮ ವ್ಯಾಪ್ತಿಯಲ್ಲಿ ಮತ ಯಾಚಿಸಿದರು. ಅಲ್ಲಿಂದ ಕಲಪನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಮತ ಪ್ರಚಾರ ನಡೆಸಿದರು.

ಚಿತ್ತಾನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಮತ ಪ್ರಚಾರವನ್ನು ಊರಿನ ಪ್ರಮುಖ ಬೀದಿ, ಬಸ್ ನಿಲ್ದಾಣದಿಂದ ನಡೆಸಲಾಯಿತು. 38ನೇ ವಾರ್ಡ್ ವ್ಯಾಪ್ತಿಯಲ್ಲಿನ ಮಾಮಾಸ್ ಜಾಯಿಂಟ್ ರಸ್ತೆಯಿಂದ ಮತ ಯಾಚಿಸಿದರು.

ಪ್ರಚಾರದಲ್ಲಿ ಶಾಸಕರಾದ ಎಸ್.ಎ. ರವೀಂದ್ರನಾಥ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖಂಡರುಗಳಾದ ಜಯಪ್ರಕಾಶ್ ಕೊಂಡಜ್ಜಿ, ಹೇಮಂತ ಕುಮಾರ್, ಶಿವರಾಜ್ ಪಾಟೀಲ್, ಹೆಚ್.ಎನ್. ಶಿವಕುಮಾರ್, ಜಿಲ್ಲಾ ಬಿಜೆಪಿ ದಕ್ಷಿಣ ಮಂಡಲ ಅಧ್ಯಕ್ಷ ಸಂಗನಗೌಡ್ರು, ಎನ್. ರಾಜಶೇಖರ್, ಜ್ಯೋತಿ ಸಿದ್ದೇಶ್, ಮಾಧ್ಯಮ ಪ್ರಮುಖ್ ಡಿ. ಎಸ್. ಶಿವಶಂಕರ್, ಪಾಲಿಕೆ ಸದಸ್ಯರಾದ ಗೌರಮ್ಮ ಗಿರೀಶ್, ಹೆಚ್.ಸಿ. ಜಯಮ್ಮ, ಯುವ ಮೋರ್ಚಾ ಅಧ್ಯಕ್ಷ ಸಚ್ಚಿನ್ ವೆರ್ಣೇಕರ್, ವಿನಯ್ ದಿಳ್ಯಪ್ಪ, ಪಿ.ಸಿ. ಶ್ರೀನಿವಾಸ್, ಲತಾ ನಾಗರಾಜ್ ಲೋಕಿಕೆರೆ ಸೇರಿದಂತೆ ಇತರರು ನಾಗರಾಜ್ ಲೋಕಿಕೆರೆ ಅವರಿಗೆ ಸಾಥ್ ನೀಡಿ, ಮತ ಯಾಚಿಸಿದರು.

## ನಗರದಲ್ಲಿ ಇಂದು 'ಕಲಾಕುಂಚ ನಡೆ ಮತದಾನದ ಕಡೆ' ಜಾಥಾ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಕರ್ನಾಟಕ ರಾಜ್ಯದ ಚುನಾವಣೆ ಪ್ರಯುಕ್ತ ಸಾರ್ವಜನಿಕರಲ್ಲಿ ಮತದಾನದ ಜಾಗೃತಿ ಮೂಡಿಸಲು ಇಂದು ಸಂಜೆ 5 ಗಂಟೆಗೆ ನಗರದ ಜಯದೇವ ವೃತ್ತದಿಂದ ವಿವಿಧ ರಾಜಬೀದಿಗಳಲ್ಲಿ 'ಕಲಾಕುಂಚ ನಡೆ ಮತದಾನದ ಕಡೆ ಕಾಲ್ನಡಿಗೆ ಜಾಥಾ' ಹಮ್ಮಿಕೊಳ್ಳಲಾಗಿದೆ ಎಂದು ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ, ಕಲಾಕುಂಚ ಸಂಸ್ಥೆಯ ಅಧ್ಯಕ್ಷ ಕೆ.ಹೆಚ್. ಮಂಜುನಾಥ್ ವಿನಂತಿಸಿದ್ದಾರೆ.

# ಎ.ಐ. ನೆರವಿನಿಂದ ಹೊಸ ಖಗೋಳ ಅನ್ವೇಷಣೆ

**ಹಿಂದೆಂದಿಗಿಂತಲೂ ವಿಶ್ವದ ಹೆಚ್ಚಿನ ಜ್ಞಾನ**

ವಾಷಿಂಗ್ಟನ್, ಮೇ 6 - ದೂರ ದರ್ಶಕಗಳು ದಿನೇ ದಿನೇ ಪ್ರಬಲ ವಾಗುತ್ತಿರುವುದು ಖಗೋಳಶಾಸ್ತ್ರಜ್ಞರ ಅನ್ವೇಷಣೆಗಳಿಗೆ ನೆರವಾಗುತ್ತಿದೆ. ಆದರೆ, ದೂರದರ್ಶಕಗಳ ಅಪಾರ ಮಾಹಿತಿ ಪರಿಶೀಲಿಸಲು ಈಗ ಕೃತಕ ಬುದ್ಧಿವಂತಿಕೆ (ಎ.ಐ.) ಅನಿವಾರ್ಯ ಎಂಬ ಪರಿಸ್ಥಿತಿ ಉಂಟಾಗಿದೆ.

2019ರಲ್ಲಿ ಕಪ್ಪು ಕುಳಿಯ ಮೊದಲ ಚಿತ್ರ ತೆಗೆಯಲಾಗಿತ್ತು. ಕೃತಕ ಬುದ್ಧಿವಂತಿಕೆಯ ನೆರವಿನಿಂದ ಈ ಚಿತ್ರವನ್ನು ಎರಡು ಪಟ್ಟು ಹೆಚ್ಚು ನಿಖರಗೊಳಿಸಿರುವುದು ಇದಕ್ಕೊಂದು ಉದಾಹರಣೆಯಾಗಿದೆ.

ಕಪ್ಪು ಕುಳಿ ಹಾಗೂ ಬೇರೆ ನಕ್ಷತ್ರಗಳಲ್ಲಿರುವ ಗ್ರಹಗಳು ಮತ್ತಿತರೆ ಅಧ್ಯಯನಕ್ಕೆ ಖಗೋಳಶಾಸ್ತ್ರಜ್ಞರು ಎ.ಐ. ಬಳಸುತ್ತಿದ್ದಾರೆ. 1990ರಿಂದಲೇ ಎ.ಐ. ಬಳಕೆ ಆರಂಭವಾಗಿತ್ತು. ಈಗ ಹೆಚ್ಚು ವ್ಯಾಪಕವಾಗಿದೆ ಎಂದು ಅಮೆರಿಕದ ಅರಿಜೋನಾ ವಿಶ್ವವಿದ್ಯಾಲಯದ ಖಗೋಳಶಾಸ್ತ್ರ ಉಪನ್ಯಾಸಕ ಕ್ರಿಸ್ ಇಂಪಿ ಹೇಳಿದ್ದಾರೆ.

ಎ.ಐ. ಈಗ ಖಗೋಳಶಾಸ್ತ್ರದ ಪ್ರತಿಯೊಂದು ವಿಭಾಗದಲ್ಲಿ ಹರಡಿದೆ. ತಂತ್ರಜ್ಞಾನ ಹೆಚ್ಚು ಸಶಕ್ತವಾಗಿದೆ. ವಿಶ್ವದ ಬಗ್ಗೆ ಬರುತ್ತಿರುವ ಹೊಸ ಜ್ಞಾನದ ಮಾಹಿತಿ ಅರ್ಥ ಮಾಡಿಕೊಳ್ಳಲು ಎ.ಐ. ಸೂತ್ರಗಳು ನೆರವಾಗುತ್ತಿವೆ ಎಂದವರು ಹೇಳಿದ್ದಾರೆ.

ಸುದೀರ್ಘ ಕಾಲ ಖಗೋಳಶಾಸ್ತ್ರ ಸರಳವಾಗಿತ್ತು. ಬರಿಗಣ್ಣು ಇಲ್ಲವೇ ಸರಳ ದೂರದರ್ಶಕದ ಮೂಲಕ ಆಕಾಶ ಕಾಯಗಳನ್ನು ಅರ್ಥ ಮಾಡಿಕೊಳ್ಳಲಾಗುತ್ತಿತ್ತು. ಆಗ ಕೆಲವೇ ಸಾವಿರ ತಾರೆಗಳು ಹಾಗೂ ಕೈ ಬೆರಳೆಣಿಕೆಯ ಗ್ರಹಗಳನ್ನು ನೋಡಲು ಸಾಧ್ಯವಾಗುತ್ತಿತ್ತು.

ಶತಮಾನದ ಹಿಂದೆ ಎಡ್ವಿನ್ ಹಬಲ್ ರೂಪಿಸಿದ ಹೊಸ ದೂರದರ್ಶಕಗಳು ಕೇವಲ ತಾರೆಗಳಷ್ಟೇ ಅಲ್ಲದೇ ಅಗಣಿತ ನಕ್ಷತ್ರ ಪುಂಜಗಳನ್ನು ತೋರಿಸಿದವು. ದೂರದರ್ಶಕಗಳ ಸುಧಾರಣೆಯಾಗುತ್ತಾ ಸಾಗಿದಂತೆ ದೊಡ್ಡ ಸಂಖ್ಯೆಯಲ್ಲಿ ಆಕಾಶ ಕಾಯಗಳನ್ನು ನೋಡಲು ಸಾಧ್ಯವಾಗಿದೆ. ಇದೇ ವೇಳೆ ಖಗೋಳಶಾಸ್ತ್ರಗಳಿಗೆ ಲಭ್ಯವಾಗುತ್ತಿರುವ ಮಾಹಿತಿಯೂ ಅಪಾರ ಪ್ರಮಾಣದಲ್ಲಿ ಹೆಚ್ಚಾಗಿದೆ.

ಚಿಲಿಯಲ್ಲಿ ಸಿದ್ಧಪಡಿಸಲಾಗುತ್ತಿರುವ ವೆರಾ ರುಬಿನ್ ವೀಕ್ಷಣಾಲಯದ ಮೂಲಕ ದೊಡ್ಡ ಗಾತ್ರದ ಚಿತ್ರಗಳನ್ನು ತೆರೆಯಲು ಸಾಧ್ಯವಾಗಲಿದೆ. ಇಲ್ಲಿ ದೊರೆಯುವ ಒಂದೇ ಚಿತ್ರ ನೋಡಲು 1,500 ಹೆಚ್.ಡಿ. ಟಿವಿ ತೆರೆಗಳು ಬೇಕಾಗುತ್ತವೆ. ಹತ್ತು ವರ್ಷಗಳಲ್ಲಿ ಇದು 0.5 ಎಕ್ಸಾಬೈಟ್ ಮಾಹಿತಿ ನೀಡುವ ಅಂದಾಜಿದೆ. ಇದು ಅಮೆರಿಕದ ಕಾಂಗ್ರೆಸ್‌ನ ಗ್ರಂಥಾಲಯದಲ್ಲಿರುವ ಪುಸ್ತಕಗಳಲ್ಲಿನ ಎಲ್ಲ ಮಾಹಿತಿಗೂ 50 ಸಾವಿರ ಪಟ್ಟು ಹೆಚ್ಚಾಗಿದೆ. ಎಂದು ಇಂಪಿ ತಿಳಿಸಿದ್ದಾರೆ.

ಇಷ್ಟೊಂದು ಮಾಹಿತಿಯನ್ನು ವಿಶ್ಲೇಷಿಸುವುದು ಎಂದರೆ ಹುಲ್ಲಿನ ಬಣವೆಯಲ್ಲಿ ಸೂಜಿ ಹುಡುಕಿದಂತೆ. ಅಲ್ಲದೇ, ಈ ಚಿತ್ರಗಳಲ್ಲಿನ ಶೇ.99ರಷ್ಟು ಮಾಹಿತಿಯು ವಿಕಿರಣ ಮತ್ತಿತರೆ ಮೂಲಗಳದ್ದು. ಶೇ.1ರಷ್ಟು ಮಾಹಿತಿಯಲ್ಲಿ ಮಾತ್ರ ನಕ್ಷತ್ರಪುಂಜಗಳ ವಿವರ ಇರುತ್ತದೆ.

ಹೀಗಾಗಿ ಅಗತ್ಯ ಮಾಹಿತಿ ಪಡೆಯಲು ಎ.ಐ. ಸೂತ್ರಗಳನ್ನು ರೂಪಿಸಲಾಗಿದೆ. ಈಗಿನ ಎ.ಐ. ಸೂತ್ರಗಳು ಶೇ.98ರಷ್ಟು ನಿಖರವಾಗಿ ನಕ್ಷತ್ರ ಪುಂಜಗಳನ್ನು ಗುರುತಿಸಬಲ್ಲವು.

ಸರ್ಚ್ ಫಾರ್ ಎಕ್ಸ್‌ಟ್ರಾಟೆರೆಸ್ಟ್ರಿಯಲ್ ಇಂಟಲಿಜೆನ್ಸ್ (ಎಸ್.ಇ.ಟಿ.ಐ.) ನಲ್ಲಿ ಕಾರ್ಯನಿರ್ವಹಿ ಸುವ ಖಗೋಳ ಶಾಸ್ತ್ರಜ್ಞರು ರೇಡಿಯೋ ಟೆಲಿಸ್ಕೋಪ್ ಮೂಲಕ ಬೇರೆ ಗ್ರಹಗಳಲ್ಲಿ ನಾಗರಿಕತೆ ಇರಬಹುದೇ ಎಂಬ ಶೋಧ ನಡೆಸಿದ್ದಾರೆ. ಮೊದಲು ಇವರು ಲಕ್ಷಾಂತರ ಕಂಪ್ಯೂಟರ್ ಹಾಗೂ ಲಕ್ಷಾಂತರ ಖಾಸಗಿ ವಿಜ್ಞಾನಿಗಳ ನೆರವು ಪಡೆಯುತ್ತಿದ್ದರು. ಈಗ ಕೃತಕ ಬುದ್ಧಿವಂತಿಕೆ ಮೂಲಕ ಕೆಲಸ ತ್ವರಿತವಾಗಿ ನೆರವೇರುತ್ತಿದೆ.

ನಕ್ಷತ್ರ ಪುಂಜಗಳು ಹಾಗೂ ಗ್ರಹಗಳ ಮಾಹಿತಿ ಪತ್ತೆ ಮಾಡುವಲ್ಲಿ ಎ.ಐ. ದಿನೇ ದಿನೇ ಹೆಚ್ಚು ನಿಖರತೆ ಪಡೆಯುತ್ತಿದೆ. ಈ ತಂತ್ರಜ್ಞಾನ ಕೇವಲ ಸಿದ್ಧಾಂತ ಸ್ವರೂಪದಲ್ಲಿರುವ ಆದರೆ, ನೈಜ ಜಗತ್ತಿನಲ್ಲಿ ಇದುವರೆಗೂ ಪತ್ತೆ ಮಾಡಲಾಗದ ಆಗಸದ ವಿದ್ಯಮಾನಗಳನ್ನೂ ಪತ್ತೆ ಮಾಡುತ್ತಿವೆ.

ಇತ್ತೀಚೆಗಷ್ಟೇ ದಕ್ಷಿಣ ಆಫ್ರಿಕಾದ ಖಗೋಳಶಾಸ್ತ್ರಜ್ಞರು ಎ.ಐ. ಸೂತ್ರಗಳನ್ನು ಬಳಸಿ ಎರಡು ಬೃಹತ್ ಕಪ್ಪು ಕುಳಿಗಳ ವಿಲೀನದ ಜಾಡನ್ನು ಪತ್ತೆ ಮಾಡಿದ್ದರು. ಇದು ನಿಜವೆಂಬುದು ಸಾಬೀತಾದರೆ, ಅಲ್ಬರ್ಟ್ ಐನ್‌ಸ್ಟೀನ್ ರೂಪಿಸಿರುವ ಸಾಮಾನ್ಯ ಸಾಪೇಕ್ಷ ಸಿದ್ಧಾಂತ ಹೊಸ ಪರೀಕ್ಷೆಗೆ ಒಳಪಡಲಿದೆ.

ಹಾರ್ವರ್ಡ್ - ಸ್ಮಿತ್ಸೋನಿಯನ್ ಸೆಂಟರ್ ಫಾರ್ ಅಸ್ಟ್ರಾಫಿಸಿಕ್ಸ್‌ನ ತಂಡವೊಂದು ಇತ್ತೀಚೆಗೆ ಆಸ್ಟ್ರೋಬರ್ಟ್ ಎಂಬ ಮಾದರಿಯನ್ನು ರೂಪಿಸಿತ್ತು. ಈ ಮೂಲಕ ಖಗೋಳಶಾಸ್ತ್ರದ 15 ದಶಲಕ್ಷ ಸಂಶೋಧನಾ ಬರಹಗಳನ್ನು ಓದಿ ವಿಶ್ಲೇಷಿಸಲಾಗಿತ್ತು.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಎ.ಐ. ಮುಂದಿನ ದಿನಗಳಲ್ಲಿ ಖಗೋಳಶಾಸ್ತ್ರಜ್ಞರಿಗೆ ಅಗತ್ಯ ಹಾಗೂ ಅನಿವಾರ್ಯ ಉಪಕರಣವಾಗಲಿದೆ.

## ಗುಡಿಸಲು ವಾಸಿಗಳ ಅಹವಾಲು ಆಲಿಸಿದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ

**30, 42ನೇ ವಾರ್ಡಿನಲ್ಲಿ ಬಿರುಸಿನ ಪ್ರಚಾರ**

ದಾವಣಗೆರೆ, ಮೇ 6- ದಾವಣಗೆರೆ ಉತ್ತರ, ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು 30 ಮತ್ತು 42ನೇ ವಾರ್ಡಿನಲ್ಲಿ ಬಿರುಸಿನ ಪ್ರಚಾರ ನಡೆಸುವರು.

30ನೇ ವಾರ್ಡಿನ ಆವರೆಗೆರೆಯಲ್ಲಿನ ಶ್ರೀ ಆಂಜನೇಯ ದೇವಸ್ಥಾನದಿಂದ ಮತ ಪ್ರಚಾರ ಆರಂಭಿಸಿ ಅಲ್ಲಿನ ಪ್ರತಿ ಓಣಿ, ಕೇರಿಗಳಲ್ಲಿ ಸಂಚಾರ ನಡೆಸಿ, ಮತ ಯಾಚಿಸಿದರು. ಗುಡಿಸಲು ವಾಸಿಗಳ ಅಹವಾಲು ಆಲಿಸಿದ ನಾಗರಾಜ್ ಲೋಕಿಕೆರೆ ಅವರು ತಮ್ಮನ್ನು ಈ ಬಾರಿಯ ಚುನಾವಣೆಯಲ್ಲಿ ಬೆಂಬಲಿಸಿ ಆಶೀರ್ವಾದ ನೀಡಿದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಸೂರು ಕಲ್ಪಿಸುವ ಜೊತೆಗೆ ಜೀವನಕ್ಕೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ನಂತರ 42ನೇ ವಾರ್ಡಿನ ಸಿದ್ದವೀರಪ್ಪ ಬಡಾವಣೆ ಬಾಪೂಜಿ ಶಾಲೆ ಬಳಿ ಇರುವ ಶ್ರೀ ಗಣಪತಿ ದೇವಸ್ಥಾನದಿಂದ ಮತಯಾಚಿಸಿದರು.

30ನೇ ವಾರ್ಡಿನ ಅಧ್ಯಕ್ಷ ಮಂಜಣ್ಣ, ಬೂತ್ ಅಧ್ಯಕ್ಷ ಮುರುಗೇಶ್, ಪ್ರಕಾಶ್, ನಗರ ಪಾಲಿಕೆ ಮಾಜಿ ಸದಸ್ಯ ಸುರೇಶ, ಮಹಾದೇವಣ್ಣ, ಚಂದ್ರಣ್ಣ, ಪಿ. ಕೇಶವನ್, ಗೋಶಾಲೆ ಸುರೇಶ, ಅಜ್ಜನ್ ಗೌಡ ಸೇರಿದಂತೆ ಬಿಜೆಪಿ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ನಾಗರಾಜ್ ಲೋಕಿಕೆರೆ ಪರ ಮತ ಯಾಚಿಸಿದರು.



## ಮಣಿಪುರ ಹಿಂಸಾಚಾರ ಮೃತರ ಸಂಖ್ಯೆ 54ಕ್ಕೆ

ಇಂಫಾಲ್, ಮೇ 6 - ಮಣಿಪುರ ಹಿಂಸಾ ಚಾರದಲ್ಲಿ ಮೃತರ ಸಂಖ್ಯೆ 54ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದರೆ, ಮೃತರ ಸಂಖ್ಯೆ ಇನ್ನೂ ಹೆಚ್ಚಾಗಿದೆ ಎಂದು ಅನಧಿಕೃತ ಮೂಲಗಳು ತಿಳಿಸಿವೆ.

ಇಂಫಾಲ್ ಕಣಿವೆಯಲ್ಲಿ ಶನಿವಾರ ಪರಿಸ್ಥಿತಿ ಸಾಮಾನ್ಯಗೊಳ್ಳುತ್ತಿದ್ದು, ಅಂಗಡಿಗಳು ಮತ್ತೆ ತೆರೆದಿವೆ. ರಸ್ತೆಯಲ್ಲಿ ವಾಹನಗಳು ಕಂಡು ಬರುತ್ತಿವೆ. ರಾಜ್ಯದ ಪರಿಸ್ಥಿತಿ ನಿಭಾಯಿಸಲು ಹೆಚ್ಚಿನ ಸೈನ್ಯ, ಕ್ಷಿಪ್ರ ಕಾರ್ಯಾಚರಣೆ ಹಾಗೂ ಕೇಂದ್ರೀಯ ಪೊಲೀಸ್ ಪಡೆಗಳನ್ನು ರವಾನಿಸಲಾಗಿದೆ. ಈ ನಡುವೆ, ಚಾರುಚಂದಪುರ ಜಿಲ್ಲೆಯಲ್ಲಿ ನಡೆದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಐವರು ಉಗ್ರರು ಹತರಾಗಿದ್ದಾರೆ ಮತ್ತು ಮೀಸಲು ಪಡೆಯ ಇಬ್ಬರು ಸೈನಿಕರು ಗಾಯ ಗೊಂಡಿದ್ದಾರೆ. ಹಿಂಸಾಚಾರದ ನಂತರ 13 ಸಾವಿ ರ ಜನರನ್ನು ರಕ್ಷಿಸಿ ಸುರಕ್ಷಿತ ಸ್ಥಳಗಳಿಗೆ ರವಾನಿ ಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

PIAGGIO ape **ಬೇಕಾಗಿದ್ದಾರೆ** PIAGGIO ape

ಆಪೆ ಆಟೋ Diesel, LPG, CNG ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್ ಪಿಜಿ ತ್ರಿಚಕ್ರ ವಾಹನಗಳ ಮಾರಾಟ ಮಾಡಲು ತಾಲ್ಲೂಕುವಾರು

**ಸೇಲ್ಸ್ ಎಕ್ಸಿಕ್ಯೂಟಿವ್ಸ್-6**
**ಸೇಲ್ಸ್ ಮ್ಯಾನೇಜರ್-1**
(ಅಭ್ಯರ್ಥಿಗಳು ಸ್ವಂತ ಬೈಕ್ ಹೊಂದಿರಬೇಕು.)

ವಿದ್ಯಾರ್ಹತೆ: SSLC to Degree. ಆಕರ್ಷಕ ಸಂಬಳ + Incentive+TA, DA.

**ವರ್ಕ್‌ಶಾಪ್ ಸೂಪರ್‌ವೈಸರ್-2**
ಹೊಸಬರಿಗೂ ಕೂಡ ಆದ್ಯತೆ ಇದೆ

ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:

**ಗಣೇಶ ಮೋಟಾರ್** ಶೆಲ್ ಪೆಟ್ರೋಲ್ ಬಂಕ್ ಎದುರು, ಶೃತಿ ಮೋಟಾರ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ-6. Mob: 84949 43963

**ವಿದೇಶ ಪ್ರವಾಸ - ಶುಭ ಹಾರೈಕೆ**



**ಎಸ್.ಸಿ.ಚಂದ್ರಪ್ಪ ಜರೀಕಟ್ಟೆ**

ಇವರು ಕೋಟಕ್ ಮಹೀಂದ್ರ ಲೈಫ್ ಇನ್ಶೂರೆನ್ಸ್, ದಾವಣಗೆರೆ ಶಾಖೆ ವತಿಯಿಂದ ಲೈಫ್ ಇನ್ಶೂರೆನ್ಸ್ ನಲ್ಲಿ ಮಾಡಿದ ಸಾಧನೆಗಾಗಿ ದಿನಾಂಕ : 8.5.2023 ರ ಸೋಮವಾರ ಬೆಳಿಗ್ಗೆ ಬೆಂಗಳೂರು ಮೂಲಕ ದುಬೈ ಪ್ರವಾಸ ಕೈಗೊಂಡಿದ್ದಾರೆ. ಇವರ ಪ್ರವಾಸ ಸುಖಕರವಾಗಿರಲಿ ಹಾಗೂ ಕ್ಷೇಮವಾಗಿರಲೆಂದು ಶುಭ ಹಾರೈಸುತ್ತೇವೆ.

✦ ರಾಘವೇಂದ್ರ ಎಸ್. ಬಾದಾಮಿ, DVP,
✦ ಕೆ.ಹೆಚ್. ರಾಘವೇಂದ್ರ, ಮ್ಯಾನೇಜರ್
✦ ಬಿ.ಹೆಚ್. ಸತೀಶ್, ಏಜೆನ್ಸಿ ಪಾರ್ಟ್‌ನರ್.
ಕೋಟಕ್ ಮಹೀಂದ್ರ ಲೈಫ್ ಇನ್ಶೂರೆನ್ಸ್, ದಾವಣಗೆರೆ ಶಾಖೆ

## 32ನೇ ವಾರ್ಡಿನಲ್ಲಿ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಮಿಂಚಿನ ಸಂಚಾರ



ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ನಗರ ಪಾಲಿಕೆಯ 32ನೇ ವಾರ್ಡಿನ ಪ್ರತಿ ಗಲ್ಲಿಗಳಲ್ಲೂ ಬಿರುಸಿನ ಮತ ಪ್ರಚಾರ ನಡೆಸಿದರು.

ಸಂಜೆ 32ನೇ ವಾರ್ಡಿನ ನಿಟ್ಟುವಳ್ಳಿ ಭಾಗದಲ್ಲಿ ಮತಯಾಚಿಸಿ ಮತದಾರರ ಮನ ಸೆಳೆದರು. ಪ್ರಚಾರದ ವೇಳೆ ವಾರ್ಡಿನ ಮತದಾರರು ನಾಗರಾಜ್ ಲೋಕಿಕೆರೆ ಅವರಿಗೆ ಬೆಂಬಲ ಸೂಚಿಸಿದರು.

ನಗರಪಾಲಿಕೆ ಸದಸ್ಯರಾದ ಉಮಾ ಪ್ರಕಾಶ್, ದೂಡಾ ಅಧ್ಯಕ್ಷ ಎ.ವೈ. ಪ್ರಕಾಶ್, ಮಾಜಿ ಉಪ ಮಹಾಪೌರರಾದ ಜಯಣ್ಣ ಸೇರಿದಂತೆ ವಾರ್ಡಿನ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

## ತ್ಯಾವಣಿಗಿಯಲ್ಲಿ ಪುಷ್ಪ ವಾಗೀಶ್ ಸ್ವಾಮಿ ಪ್ರಚಾರ



ದಾವಣಗೆರೆ, ಮೇ 6- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಶ್ರೀಮತಿ ಪುಷ್ಪ ವಾಗೀಶ್ ಸ್ವಾಮಿ ಅವರು ತ್ಯಾವಣಿಗಿ, ಬೆಳಲಗೆರೆ, ಚಿರಡೋಣಿ, ಸಾಗರಪೇಟೆ, ಬಸವಾಪಟ್ಟಣ, ದಾಗಿನಕಟ್ಟೆ ಗ್ರಾಮಗಳಲ್ಲಿ ಇಂದು ಬಿರುಸಿನ ಪ್ರಚಾರ ನಡೆಸಿದರು.

ತ್ಯಾವಣಿಗಿಯಲ್ಲಿ ಪುಷ್ಪ ವಾಗೀಶ್ ಸ್ವಾಮಿ ಅವರಿಗೆ ಜೆಸಿಬಿ ಮೂಲಕ ಪುಷ್ಪಾರ್ಚನೆ ಮಾಡಿ, ಅವರ ಅಭಿಮಾನಿಗಳು ಬೆಂಬಲ ವ್ಯಕ್ತಪಡಿಸಿದರು. ನಂತರ ವಾಗೀಶ್ ಸ್ವಾಮಿ ಅವರು ಸಂಗೊಳ್ಳಿ ರಾಯಣ್ಣನ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗೌರವ ಸಲ್ಲಿಸಿದರು. ಈ ವೇಳೆ ಯುವಕರು ಕಂಬಳಿ ಹೊದಿಸಿ, ಬೆಂಬಲ ವ್ಯಕ್ತಪಡಿಸಿದರು.

## ಹೊಸಕುಂದವಾಡದಲ್ಲಿ ಉತ್ತರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪ್ರಚಾರ



ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಹೊಸಕುಂದವಾಡದಲ್ಲಿ ಇಂದು ಪ್ರಚಾರ ನಡೆಸಿದರು. ತೆರೆದ ವಾಹನದಲ್ಲಿ ಹಾಗೂ ನಡಿಗೆ ಮುಖೇನ ಸಂಚರಿಸಿ ಮತ ಯಾಚಿಸಿದರು.

ಹೊಸಕುಂದವಾಡದ ತುಂಬೆಲ್ಲಾ ನಾಗರಾಜ್ ಲೋಕಿಕೆರೆ ಅವರು ಮತ ಪ್ರಚಾರ ನಡೆಸಿದಾಗ, ಅವರೊಂದಿಗೆ ಪಕ್ಷದ ಮುಖಂಡರು, ಕಾರ್ಯಕರ್ತರು, ಗ್ರಾಮದ ಪ್ರಮುಖರು, ನೂರಾರು ಗ್ರಾಮಸ್ಥರು ಸಾಥ್ ನೀಡಿ ಮತಯಾಚಿಸಿದರು. ಸಂಕೋಳ್ ಚಂದ್ರಶೇಖರ್, ಜೊಳ್ಳಿ ಗುರು, ಮಹೇಶ್, ಹೆಚ್.ಎನ್. ಶಿವಕುಮಾರ್ ಸೇರಿದಂತೆ ಇತರರು ಇದ್ದರು.

## ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪರ ಬೆಂಬಲಕ್ಕೆ ನಿಂತ ಹೊಸ ಕುಂದವಾಡದ ಯುವಕರು



**ಜೆಡಿಎಸ್ ತೊರೆದು ಬಿಜೆಪಿ ಸೇರ್ಪಡೆ**

ದಾವಣಗೆರೆ, ಮೇ 6- ಉತ್ತರ ವಿಧಾನಸಭಾ ಕ್ಷೇತ್ರದ ಹೊಸ ಕುಂದವಾಡದ ವಾರ್ಡ್‌ನ ಕರಿಗಾರ್ ಮಂಜುನಾಥ್ ಅವರು ಅಪಾರ ಬೆಂಬಲಿಗರೊಂದಿಗೆ ಜೆಡಿಎಸ್ ಪಕ್ಷ ತೊರೆದು ಬಿಜೆಪಿ ಪಕ್ಷಕ್ಕೆ ಸೇರ್ಪಡೆಯಾದರು. ಆ ಮೂಲಕ ದಾವಣಗೆರೆ ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಗಳಾದ ಲೋಕಿಕೆರೆ ನಾಗರಾಜ್ ಅವರ ಪರವಾಗಿ ಬೆಂಬಲ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ಮಾಜಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಅಣಜಿಗೆರೆಯಲ್ಲಿ ಮತದಾರರ ಜಾಗೃತಿ ಅಭಿಯಾನ



ಹರಪನಹಳ್ಳಿ, ಮೇ 6- ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಅಣಜಿಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಜಂಗಮತುಂಬಿಗೆರೆಯಲ್ಲಿ ಬುಧವಾರ ಸ್ವೀಪ್ ಸಮಿತಿಯಿಂದ ಮತದಾರರ ಜಾಗೃತಿ ಅಭಿಯಾನದ ನಡೆಯಿತು. ಮತದಾರರ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಅಂಜಿನಪ್ಪ ಅವರು, ಮತದಾರರು ಯಾವುದೇ ಆಸೆ, ಹಣ ಅಥವಾ ಆಮಿಷಗಳಿಗೆ ಒಳಗಾಗದೇ ಪ್ರತಿಯೊಬ್ಬರೂ ಮೇ 10ರಂದು ನಡೆಯುವ ಚುನಾವಣೆಯಲ್ಲಿ ಕಡ್ಡಾಯವಾಗಿ ತಮ್ಮ ಹಕ್ಕನ್ನು ಚಲಾಯಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಮತದಾರರ ಜಾಗೃತಿ ಅಭಿಯಾನದ ಅಂಗವಾಗಿ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ, ಆಶಾ ಕಾರ್ಯಕರ್ತೆಯರು, ಮಹಿಳಾ ಸ್ವಸಹಾಯ ಸಂಘ ಸೇರಿದಂತೆ ವಿಶೇಷ ಚೇತನರು ಭಾಗವಹಿಸಿದ್ದರು.

## ಜನ ಬೆಂಬಲವನ್ನಾಧರಿಸಿ ಉತ್ತಮ ಪ್ರಜಾಕೀಯ ಅಭ್ಯರ್ಥಿಗಳ ಆಯ್ಕೆ

ದಾವಣಗೆರೆ, ಮೇ 6- ಜನ ಬೆಂಬಲದ ಆಧಾರದ ಮೇಲೆ ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಗಳಿಗೆ ಟಿಕೇಟ್ ನೀಡಲಾಗಿದೆ ಎಂದು ಪಕ್ಷದ ಜಿ.ಆರ್. ನಾಗಾರ್ಜುನ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತಮ ಪ್ರಜಾಕೀಯ ಪಕ್ಷದಿಂದ ಯಾವುದೇ ಪ್ರಣಾಳಿಕೆಯನ್ನು ಬಿಡುಗಡೆ ಮಾಡುವುದಿಲ್ಲ. ಆದರೆ ಜನರ ಪರವಾಗಿ ಪ್ರಜಾಪ್ರತಿನಿಧಿಯ ಕಾರ್ಯ ವೈಖರಿಯ ವಿಧಾನದ ಪ್ರಕಾರ ಕೆಲಸ ಮಾಡಲಿದ್ದೇವೆ ಎಂದು ಹೇಳಿದರು. ಅಭ್ಯರ್ಥಿಗಳಾದ ಚೇತನ ಕುಮಾರ್ ಅರೇಹಳ್ಳಿ, ಗಣೇಶ್, ಎಂ. ಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ನಾಗರಾಜ್ ಲೋಕಿಕೆರೆ ಪ್ರಚಾರಕ್ಕೆ ಎಸ್.ಎ.ರವೀಂದ್ರನಾಥ್ ಸಾಥ್



**ಪ್ರಚಾರಕ್ಕೆ ಸ್ಪಂದಿಸಿದ ಆವರಗೊಳ್ಳ, ಕಕ್ಕರಗೊಳ್ಳ, ಕೋಡಿಹಳ್ಳಿ ಸುತ್ತಮುತ್ತಲಿನ ಗ್ರಾಮಸ್ಥರು**

ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ ಮತ ಪ್ರಚಾರಕ್ಕೆ ಮಾಜಿ ಸಚಿವರೂ ಆದ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಸಾಥ್ ನೀಡಿದರು.

ಆವರಗೊಳ್ಳದ ಗಣೇಶ ದೇವಸ್ಥಾನ, ಆವರಗೊಳ್ಳದ ಪುರವರ್ಗ ಮಠ ಜಗದ್ಗುರು ಶ್ರೀ ರೇಣುಕಾಚಾರ್ಯ ಮಠ, ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಮತ ಯಾಚನೆ ಮಾಡಿದರು.

ಈ ವೇಳೆ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್ ಅವರು ಸಹ ಜೊತೆಗೆ ದೇವರುಗಳ ಕೃಪಾಶೀರ್ವಾದ ಪಡೆದು ಮತ ಪ್ರಚಾರಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು.

**ಪ್ರಚಂಡ ಬಹುಮತದಿಂದ ಗೆಲ್ಲಿಸಿ :** ಪ್ರಚಾರಕ್ಕೂ ಮುನ್ನ ಮತದಾರರನ್ನು ಉದ್ದೇಶಿಸಿ ಮಾತನಾಡಿದ ಎಸ್.ಎ. ರವೀಂದ್ರನಾಥ್ ಅವರು, ತಾವೆಲ್ಲರೂ ಬಿಜೆಪಿಯ ಮೇಲೆ ಅಭಿಮಾನ, ಗೌರವ ಇಟ್ಟಿರುವುದಕ್ಕೆ ನನ್ನ ಕೃತಜ್ಞತೆಗಳು. ಈ ಅಭಿಮಾನ, ಗೌರವ ಹೀಗೆ ಇರಲಿ. ಜೊತೆಗೆ ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಈ ಬಾರಿ ಸ್ಪರ್ಧಿಸಿರುವ ಬಿಜೆಪಿಯ ಯುವ ನಾಯಕ ನಾಗರಾಜ್ ಲೋಕಿಕೆರೆ ಅವರನ್ನು ಬೆಂಬಲಿಸಿ, ಅತಿ ಹೆಚ್ಚಿನ ಮತಗಳನ್ನು ನೀಡುವ ಮೂಲಕ ಪ್ರಚಂಡ ಬಹುಮತದಿಂದ ಗೆಲ್ಲಿಸುವಂತೆ ಮತದಾರರಲ್ಲಿ ಮನವಿ ಮಾಡಿದರು.

ನಾಗರಾಜ್ ಲೋಕಿಕೆರೆ ಮಾತನಾಡಿ, ರಾಷ್ಟ್ರೀಯ ನಾಯಕರು, ಸ್ಥಳೀಯ ಬಿಜೆಪಿ ನಾಯಕರಾದ ಜಿ.ಎಂ. ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್ ಹಾಗೂ ಮುಖಂಡರುಗಳು ಬಿಜೆಪಿಯ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿ ರುವ ನನ್ನನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದು ಸಂತಸ ತಂದಿದೆ. ನಾನೊಬ್ಬ ಸಾಮಾನ್ಯ ಅಭ್ಯರ್ಥಿಯಾಗಿದ್ದರೂ ಸಾವಿರಾರು ಕೋಟಿ ಒಡೆಯರ ಎದುರು ಸ್ಪರ್ಧಿಸಲು ನನಗೆ ಅವಕಾಶ ನೀಡಿರುವುದು ಪಕ್ಷ ನನ್ನ ಮೇಲಿಟ್ಟಿರುವ ನಂಬಿಕೆಯಾಗಿದೆ ಎಂದು ತಿಳಿಸಿದರು.

**ನಾನು ಜನ ಸೇವಕ :** ಜನನಾಯಕನ ಆಯ್ಕೆ ವಿಚಾರದಲ್ಲಿ ಯೋಚಿಸಿ ಹೆಜ್ಜೆ ಇಡಬೇಕಾಗಿದ್ದು, ಸಾಮಾನ್ಯ ಕಾರ್ಯಕರ್ತ ಜನರಿಗೆ ಸ್ಪಂದಿಸಿ ಸೇವೆ ನೀಡುವಂತಹ ಸೇವಕ ಮತ್ತು ಶಾಸಕ ಬೇಕೇ ಎಂಬುದನ್ನು ಮತದಾರರೇ ನಿರ್ಧರಿಸಬೇಕು ಎಂದರು.

ಕಕ್ಕರಗೊಳ್ಳ, ಕೋಡಿಹಳ್ಳಿ ಗ್ರಾಮಗಳಲ್ಲಿ ಮನೆ ಮನೆ ಸಂಪರ್ಕ ನಡೆಸಿ ಮತ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಉತ್ತರ ಮಂಡಲ ಅಧ್ಯಕ್ಷ ಸಂಗನಗೌಡ್ರು, ಮುಖಂಡರುಗಳಾದ ಹೆಚ್.ಎನ್. ಶಿವಕುಮಾರ್, ವಿ.ಟಿ. ಹನುಮೇಗೌಡ, ಬಿ. ಆನಂದ್, ಎಸ್.ಟಿ. ವೀರೇಶ್, ಮುಖಂಡರುಗಳಾದ ಸಿದ್ದಲಿಂಗಪ್ಪ, ರೈತ ಮುಖಂಡರಾದ ಕೆ.ಪಿ. ಕಲ್ಲಿಂಗಪ್ಪ, ಆವರಗೊಳ್ಳ ಷಣ್ಮುಖಯ್ಯ, ಅಡಿಕೆ ವೀರಯ್ಯ, ಶಶಿಧರಯ್ಯ, ರಾಜೇಂದ್ರ ಸ್ವಾಮಿ, ಸತೀಶ್, ತ್ಯಾವಣಿಗೆ ವೀರಭದ್ರಸ್ವಾಮಿ, ರುದ್ರೇಶ್, ಚಂದ್ರು, ಅಶ್ವರಾಜೇಶ, ಬಸಣ್ಣ, ಪೂಜಾರ್ ಬಸವರಾಜ, ರವಿ, ಖಲೀಲ್ ಸಾಬ್, ಪಂಡರಹಳ್ಳಿ ವೀರಭದ್ರ, ಗುಳೇದರ ವಾಗೀಶ, ವಿನಯ್ ಗೌಡ್ರು, ಗುರುಶಾಂತಪ್ಪ, ಸಂಗನಗೌಡ್ರು, ಕೆ.ಪಿ.ಲಿಂಗರಾಜ್, ಕೆ.ಪಿ. ರಾಜೇಶ್ವರಿ, ಕಾಡಜ್ಜಿ ಸಿದ್ದೇಶ್ವರ್, ರಾಮನಗೌಡ್ರು, ಹನುಮಂತಪ್ಪ, ಕೋಳೇನಹಳ್ಳಿ ಜಯ ಸೇರಿದಂತೆ ಗ್ರಾಮದ ಪ್ರಮುಖರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಸಂಜೆ ಶ್ರೀಮತಿ ರೇಣುಕಾ ಶ್ರೀನಿವಾಸ್ ಅವರ 29ನೇ ವಾರ್ಡ್ ನಲ್ಲಿ ಮಣಿಕಂಠ ವೃತ್ತದಿಂದ ಮತದಾರರ ಮನೆಗಳಿಗೆ ತೆರಳಿ ಮತ ಪ್ರಚಾರ ನಡೆಸಲಾಯಿತು.

# ಬಿಜೆಪಿ ಅಭ್ಯರ್ಥಿ ಪರ ಎಸ್ಸೆನ್ ಬಡಾವಣೆ ಸುತ್ತಮುತ್ತ ಲತಾ ನಾಗರಾಜ್ ಲೋಕಿಕೆರೆ ಬಿರುಸಿನ ಮತ ಪ್ರಚಾರ



ದಾವಣಗೆರೆ, ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರ ಪತ್ನಿ ಶ್ರೀಮತಿ ಲತಾ ನಾಗರಾಜ್ ಲೋಕಿಕೆರೆ ಅವರು ತಮ್ಮ ಪತಿಯ ಪರ ಇಂದು ಬಿರುಸಿನ ಮತ ಪ್ರಚಾರ ನಡೆಸಿದರು.

ಎಸ್.ನಿಜಲಿಂಗಪ್ಪ ಬಡಾವಣೆ, ಎಸ್‌ಓಜಿ ಕಾಲೋನಿ, ರಾಮನಗರ ಸೇರಿದಂತೆ ಸಂಜೆ ಸಿದ್ದವೀರಪ್ಪ ಬಡಾವಣೆ, ಎಂಸಿಸಿ ಬಿ ಬ್ಲಾಕ್ ಮತ್ತು ವಿವಿಧ ಬಡಾವಣೆಗಳಲ್ಲಿ ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತೆಯರ ಜೊತೆಗೂಡಿ ಮತದಾರರ ಪ್ರತಿ ಮನೆಗಳಿಗೆ ಭೇಟಿ ನೀಡಿ ಮನೆ ಮನೆ ಸಂಪರ್ಕದ ಜೊತೆಗೆ ಮತದಾರರ ಮನೆಗಳಲ್ಲಿ ಸಭೆ ನಡೆಸಿ, ಪತಿ ನಾಗರಾಜ್ ಲೋಕಿಕೆರೆ ಅವ ರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ವಾರ್ಡಿನ ಪಾಲಿಕೆ ಸದಸ್ಯರಾದ ಕುಂಬಾರ್ ನಾಗಣ್ಣ, ಗೀತಾ ಕುಂಬಾರ್ ನಾಗರಾಜ್, ಪಿ.ಸಿ. ಶ್ರೀನಿವಾಸ್, ಹರೀಶ್, ಆನಂದ್, ಹೆಚ್.ಸಿ. ಜಯಮ್ಮ, ಗಾಯತ್ರಿ, ರೇಖಾ ಸುರೇಶ್, ಗೌರಮ್ಮ ಗಿರೀಶ್, ತನು ನಂದೀಶ್, ಮೇಘನಾ, ಯಶೋಧ, ರಶ್ಮಿ ಪ್ರದೀಪ್, ಪ್ರೀತಿ ಜಗದೀಶ್, ಶ್ವೇತಾ ರಾಘವೇಂದ್ರ, ಪಲ್ಲುಣಿ,

ಸಾಕಮ್ಮ, ಬೇಬಕ್ಕ, ರಂಜಿತಾ, ಜ್ಯೋತಿ ಬಸಪ್ಪ, ಚಂದ್ರಕಲಾ, ಕುಂಬಾರ್ ನಾಗರಾಜ್, ಗಾಯತ್ರಿ, ರೇಖಾ ಸುರೇಶ, ಉಷಾ ಸೇರಿದಂತೆ ಪಕ್ಷದ ಕಾರ್ಯಕರ್ತರು ಲತಾ ನಾಗರಾಜ್ ಲೋಕಿಕೆರೆ ಅವರಿಗೆ ಸಾಥ್ ನೀಡಿದ್ದರು.

# ಜಿಲ್ಲೆಯಲ್ಲಿ ಮಸ್ಟರಿಂಗ್-ಡಿಮಸ್ಟರಿಂಗ್ ಕೇಂದ್ರಗಳ ವಿವರ

ದಾವಣಗೆರೆ, ಮೇ 6- ರಾಜ್ಯ ವಿಧಾನ ಸಭೆ ಚುನಾವಣೆಯು ಇದೇ ದಿನಾಂಕ 10 ರಂದು ನಡೆಯಲಿದ್ದು, ಜಿಲ್ಲೆಯ 7 ಕ್ಷೇತ್ರ ಗಳಿಗೆ ಇದೇ ದಿನಾಂಕ 9 ರಂದು ಮಸ್ಟರಿಂಗ್ ಮತ್ತು ಇದೇ ದಿನಾಂಕ 10 ರಂದು ನಡೆಯುವ ಡಿಮಸ್ಟರಿಂಗ್ ಕೇಂದ್ರ ಗಳನ್ನು ನಿಗದಿ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.

ಜಗಳೂರು-ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಿಹರ- ಸೇಂಟ್ ಮೇರಿಸ್ ಕಾನ್ವೆಂಟ್ ಸ್ಕೂಲ್, ದಾವಣಗೆರೆ ಉತ್ತರ- ಡಿ.ಆರ್.ಆರ್.ವಿದ್ಯಾಸಂಸ್ಥೆ, ಪಿ.ಬಿ.ರಸ್ತೆ, ದಾವಣಗೆರೆ ದಕ್ಷಿಣ- ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢಶಾಲೆ, ಪಿ.ಜೆ.ಬಡಾವಣೆ, ಹೈಸ್ಕೂಲ್ ಮೈದಾನ, ಮಾಯಕೊಂಡ- ಮೋತಿ ವೀರಪ್ಪ ಪದವಿ ಪೂರ್ವ ಕಾಲೇಜು, ದಾವಣಗೆರೆ. ಚನ್ನಗಿರಿ- ಶ್ರೀ ಶಿವಲಿಂಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಹೊನ್ನಾಳಿ ಕ್ಷೇತ್ರದ ಮಸ್ಟರಿಂಗ್, ಡಿಮಸ್ಟರಿಂಗ್ ಶ್ರೀಮತಿ ಗಂಗಮ್ಮ ಶ್ರೀ ವೀರಭದ್ರಶಾಸ್ತ್ರಿ ಕೈಗಾರಿಕಾ ತರಬೇತಿ ಕೇಂದ್ರ, ಹಿರೇಕಲ್ಮಠ, ಹೊನ್ನಾಳಿ ಇಲ್ಲಿ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

# ಆತ್ಮ ನಿರ್ಭರ ಭಾರತಕ್ಕಾಗಿ ಆತ್ಮವಿಶ್ವಾಸ ಮುಖ್ಯ

## ಎಸ್‌ಬಿಸಿ ಕಾಲೇಜು ಪದವಿ ಪ್ರದಾನ ಸಮಾರಂಭದಲ್ಲಿ ಡಾ.ಬಿ.ಇ. ರಂಗಸ್ವಾಮಿ ಅಭಿಮತ



ದಾವಣಗೆರೆ, ಮೇ 6- ಆತ್ಮ ನಿರ್ಭರ ಭಾರತ ನಿರ್ಮಾಣಕ್ಕೆ ಆತ್ಮವಿಶ್ವಾಸ ಮುಖ್ಯ. ವ್ಯಕ್ತಿಗೆ ವಿಶ್ವಾಸದ ಜೊತೆ ಆತ್ಮವಿಶ್ವಾಸ ಇರಬೇಕು. ವಿದ್ಯಾರ್ಥಿಗಳು ಸಂವಹನ ಹಾಗೂ ವಿಮರ್ಶಾತ್ಮಕ ಚಿಂತನೆಗಳ ಮೂಲಕ ಬ್ರ್ಯಾಂಡ್ ಬಿಲ್ಡರ್ ಆಗಿ ಹೊರ ಹೊಮ್ಮಬೇಕೆಂದು ವಿಶ್ವೇಶ್ವರ ಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವ (ಪರೀಕ್ಷಾಂಗ) ಡಾ. ಬಿ.ಇ. ರಂಗಸ್ವಾಮಿ ಕರೆ ನೀಡಿದರು.

ನಗರದ ಎಸ್‌ಬಿಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪದವಿ ನಂತರ ವಿಫುಲ ಅವಕಾಶಗಳಿರುತ್ತವೆ. ನಿಮಗಿಷ್ಟವಾದುದನ್ನು ಆಯ್ಕೆ ಮಾಡಿಕೊಳ್ಳಬೇಕು. ಶ್ರದ್ಧೆ, ಆಸಕ್ತಿಯಿಂದ ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಿದರೆ ಮತ್ತು ಮಗುವಿನಲ್ಲಿರುವ ಮುಗ್ಧತೆ ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಿದೆ ಎಂದರು.

ಲಕ್ಷಾಂತರ, ಕೋಟ್ಯಂತರ ಹಣ ಸಂಪಾದನೆ ಮಾಡಿ ಆತ್ಮಸಾಕ್ಷಿ ಇಲ್ಲದಿದ್ದರೆ ಪ್ರಯೋಜನವೇನು? ಎಂದು ಪ್ರಶ್ನಿಸಿದ ಅವರು, ಕೇವಲ ಉನ್ನತ ಶಿಕ್ಷಣ ಪಡೆದು ಭ್ರಷ್ಟರಾದರೆ ಅಂತಹ ವ್ಯಕ್ತಿಗೆ ಅದು ಶೋಭೆಯಲ್ಲ. ಮೌಲ್ಯವಿಲ್ಲದ ಶಿಕ್ಷಣ ದಿಂದ ದೇಶಕ್ಕೆ ಯಾವುದೇ ಪ್ರಯೋಜನ ವಾಗದು. ಶಿಕ್ಷಣ ಸನ್ಮಾರ್ಗಕ್ಕೆ ಕೊಂಡೊಯ್ಯು ವಂತಾಗಬೇಕು ಎಂದರು.

ಜೀವನದಲ್ಲಿ ಸಮಯ ನಿರ್ವಹಣೆ ಅತಿಮುಖ್ಯ. ಸಮಯಕ್ಕೆ ಬೆಲೆ ಕೊಟ್ಟರೆ ಮಾತ್ರ ಸಮಯ ನಮಗೆ ಬೆಲೆ ಕೊಡುತ್ತದೆ. ಪ್ರಸ್ತುತ ಬೆರಳ ತುದಿಯಲ್ಲೇ ಎಲ್ಲಾ ಮಾಹಿತಿ ಸಿಗುವಂತಹ ತಂತ್ರಜ್ಞಾನ ಯುಗ ಇದಾಗಿದೆ. ಅದರ ಸದ್ಬಳಕೆ ಮಾಡಿಕೊಂಡು ಜೀವನದ ಗುರಿ ತಲುಪಬೇಕೆಂದರು.

ತಂದೆ-ತಾಯಂದಿರು ಶೇ. 51 ರಷ್ಟು ಮಕ್ಕಳ ಶಿಕ್ಷಣದ ಬಗ್ಗೆ ಯೋಚಿಸಿದರೆ, ಶೇ. 20 ರಷ್ಟು ಆರೋಗ್ಯ, ಶೇ.21 ರಷ್ಟು ಸಂತಸದ ಬದುಕಿನ ಬಗ್ಗೆ ಯೋಚಿಸುತ್ತಾರೆ ಎಂದು ತಿಳಿಸಿದರು.

ದಾವಣಗೆರೆ ವಿವಿ ಕುಲಸಚಿವ (ಪರೀಕ್ಷಾಂಗ) ಡಾ. ಕೆ.ಶಿವಶಂಕರ್ ಮಾತನಾಡಿ, ಕೌಶಲ್ಯಾಧಾರಿತ ಶಿಕ್ಷಣ ಪಡೆದರೆ ಮಾತ್ರ ಸಾಕಷ್ಟು ಉದ್ಯೋಗ ಅವಕಾಶಗಳು ಸಿಗಲು ಸಾಧ್ಯ. ಏನು ಮಾಡಬೇಕು. ಏನು ಮಾಡಬಾರದು ಎಂಬ ವಿವೇಚನೆ ಪ್ರತಿಯೊಬ್ಬರಲ್ಲೂ ಇರಬೇಕು ಎಂದರು.

ಸಮಯಕ್ಕೆ ಬೆಲೆ ಕೊಡುವ ಜೊತೆಗೆ ಸತ್ಯದ ಮಾರ್ಗವನ್ನು ಅನುಸರಿಸಿ, ಧರ್ಮನಿಷ್ಠೆಯನ್ನು ಹೊಂದಿದರೆ ಜೀವನದ ಗುರಿ ಸಾಧಿಸಲು ಸುಲಭ ಸಾಧ್ಯ. ಬದಲಾಗುತ್ತಿರುವ ದಿನಮಾನಕ್ಕೆ ತಕ್ಕಂತೆ ಕೌಶಲ್ಯವನ್ನು ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಆತ್ಮ ನಿರ್ಭರ ಭಾರತ ನಿರ್ಮಾಣದಲ್ಲಿ ಯುವಜನತೆ ಪಾತ್ರ ಪ್ರಮುಖವಾದುದು. ಜನಸಂಖ್ಯೆಯಲ್ಲೂ ಮುಂದಿರುವ ಭಾರತವನ್ನು ಪ್ರಗತಿಯತ್ತ ಕೊಂಡೊಯ್ಯಲು ಅತ್ಯಂತ ಬುದ್ಧಿವಂತಿಕೆ ಯಿಂದ ಸಮರ್ಪಣಾ ಮನೋಭಾವ ದಿಂದ ಹಾಗೂ ಶ್ರದ್ಧೆಯಿಂದ ಮಾಡಬೇಕು. ಇದು ಪ್ರಧಾನಿ ನರೇಂದ್ರ ಮೋದಿಯವರ ಆಶಯ ಕೂಡ ಆಗಿದೆ ಎಂದು ಹೇಳಿದರು.

ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅಧ್ಯಕ್ಷರೂ, ಜವಳಿ ವರ್ತಕರೂ ಆದ ಬಿ.ಸಿ. ಉಮಾಪತಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪಿಇಎಸ್ ಶಾಲೆಯ ಚೇರ್ಮನ್ ಆರ್. ವೆಂಕಟರೆಡ್ಡಿ, ಅಥಣಿ ಕಾಲೇಜಿನ ಪ್ರಾಚಾರ್ಯ ಪ್ರೊ. ಗುರು ಉಪಸ್ಥಿತರಿದ್ದರು.

ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಪ್ರಾಚಾರ್ಯ ಡಾ. ಕೆ. ಷಣ್ಮುಖ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಾಣಿಜ್ಯ ವಿಭಾಗದ ಮುಖ್ಯಸ್ಥೆ ಭಾಗ್ಯಶ್ರೀ ಡಿ. ಹುಬ್ಬೀಕರ್ ಸ್ವಾಗತಿಸಿದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಶ್ಯಾಗಲೆ ವಂದಿಸಿದರು.

# ನೂತನ ಮಹಿಳಾ ಸಮಾಜದಿಂದ ಕಾರ್ಮಿಕರ ದಿನಾಚರಣೆ



ದಾವಣಗೆರೆ, ಮೇ 6- ನಗರದ ವಿನೂತನ ಮಹಿಳಾ ಸಮಾಜದಿಂದ ಕಾರ್ಮಿಕರ ದಿನಾಚರಣೆಯನ್ನು ಕಾರ್ಮಿಕ ಮಹಿಳೆಯರನ್ನು ಸನ್ಮಾನಿಸುವುದರ ಮೂಲಕ ಆಚರಿಸಲಾಯಿತು.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಚಂದ್ರಿಕಾ ಮಂಜುನಾಥ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶ್ರೀಮತಿ ಮೈತ್ರಾದೇವಿ ಮಾತನಾಡಿ, ಮಹಿಳೆಯರಿಗೆ ಪೌಷ್ಟಿಕ ಮತ್ತು ಸಮತೋಲನ ಆಹಾರದ ಬಗ್ಗೆ ಮಾಹಿತಿ ಕೊಟ್ಟರು.

ಕಾರ್ಯಕ್ರಮದಲ್ಲಿ, ಜೀವನದಲ್ಲಿ ಕಷ್ಟಪಟ್ಟು ದುಡಿಯುತ್ತಿರುವ ಮೂವರು ಮಹಿಳಾ ಕಾರ್ಮಿಕರನ್ನು ಗುರುತಿಸಿ ಸನ್ಮಾನಿಸಲಾಯಿತು.

ಶ್ರೀಮತಿ ಜ್ಯೋತಿ ಜಯಪ್ಪ ಪ್ರಾರ್ಥಿಸಿದರು ಪ್ರಾಯೋಜಿಸಿದ ಕಾರ್ಯಕ್ರಮವನ್ನು ಶ್ರೀಮತಿ ಪುಷ್ಪಾ ಬಸವರಾಜ್ ನಿರೂಪಿಸಿದರು.

# ಮತದಾನ ಜಾಗೃತಿಗೆ ಚಿತ್ರಕಲಾ ಸ್ಪರ್ಧೆ, ಪ್ರತಿಜ್ಞಾ ವಿಧಿ ಬೋಧನೆ

ದಾವಣಗೆರೆ, ಮೇ 6- ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ದಾವಣಗೆರೆ ವಿಶ್ವ ವಿದ್ಯಾನಿಲಯ ದೃಶ್ಯ ಕಲಾ ಮಹಾವಿದ್ಯಾಲಯ, ಇವರ ಸಹಯೋಗದೊಂದಿಗೆ ಮತದಾನದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸುವ ಮೂಲಕ ಮತದಾನದ ಜಾಗೃತಿ ಕಾರ್ಯಕ್ರಮ ನಡೆಸಿ, ಪ್ರತಿಜ್ಞಾ ವಿಧಿಯನ್ನು ವಿದ್ಯಾರ್ಥಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್ ಬೋಧಿಸಿದರು.

ಚುನಾವಣೆಯಲ್ಲಿ ಪ್ರತಿಯೊಬ್ಬ ಮತದಾರರು ಭಾಗಿಯಾಗ ಬೇಕು, ಪ್ರಜಾಪ್ರಭುತ್ವದಲ್ಲಿ ಎಲ್ಲರ ಪಾಲ್ಗೊಳ್ಳುವಿಕೆ ಬಹಳ ಮುಖ್ಯ ವಾಗಿರುತ್ತದೆ. ಸಂವಿಧಾನದನ್ವಯ ಯಾವುದೇ ಸರ್ಕಾರ ಬಹುಮತ ಗಳಿಸಲು ಶೇ. 50 ಕ್ಕಿಂತಲೂ ಹೆಚ್ಚಿನ ಸ್ಥಾನವನ್ನು ಪಡೆದ ಪಕ್ಷಗಳು ಮಾತ್ರ ಸರ್ಕಾರವನ್ನು ರಚಿಸಲಿವೆ, ಇದಕ್ಕೆ ಪ್ರಮಾಣಾನುಗುಣ ಬಹುಮತ ಪದ್ಧತಿ ಎಂದು ಕರೆಯಲ್ಪಡಲಾಗುತ್ತದೆ. ಈ ನಿಟ್ಟಿನಲ್ಲಿ ಶಾಸಕರ ಆಯ್ಕೆಯಲ್ಲಿ ಮತದಾರರು ಶೇ 100 ರಷ್ಟು ಮತದಾನ ಮಾಡಬೇಕಾಗುತ್ತದೆ. ಹೆಚ್ಚು ಜನರು ಮತದಾನದಲ್ಲಿ ಪಾಲ್ಗೊಂಡಲ್ಲಿ ಉತ್ತಮರ ಆಯ್ಕೆಯಾಗಲಿದೆ ಎಂದು ಯುವ ಮತದಾರರನ್ನು ಕುರಿತು ಮಾತನಾಡಿದರು.

ಈ ಸಂದರ್ಭದಲ್ಲಿ ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ, ಪ್ರಾಂಶುಪಾಲರು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು.

# 27ನೇ ವಾರ್ಡಿನಲ್ಲಿ ಉತ್ತರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಪ್ರಚಾರಕ್ಕೆ ಮುತ್ತಣ್ಣ ಸಾಥ್



ದಾವಣಗೆರೆ,ಮೇ 6- ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗರಾಜ್ ಲೋಕಿಕೆರೆ ಅವರು ಮಹಾನಗರ ಪಾಲಿಕೆ 27ನೇ ವಾರ್ಡಿನಲ್ಲಿ ನಿನ್ನೆ ಬಿರುಸಿನ ಪ್ರಚಾರ ನಡೆಸಿದರು.

27ನೇ ವಾರ್ಡಿನ ಬಿಜೆಪಿ ಹಿರಿಯ ಮುಖಂಡರುಗಳಾದ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಎಂ.ಎನ್. ಚಂದ್ರಶೇಖರ್, ರಾಜು ಮತ್ತಿತರರು ಲೋಕಿಕೆರೆ ನಾಗರಾಜ್ ಅವರಿಗೆ ಸಾಥ್ ನೀಡಿದರು.

# ಕೊಟ್ಟೂರಿನ ಅಕ್ಕಿ ಚಂದ್ರಶೇಖರ್ ಕಾಂಗ್ರೆಸ್‌ಗೆ ಸೇರ್ಪಡೆ



ಕೊಟ್ಟೂರು, ಮೇ 6- ಈ ಭಾಗದ ವೀರಶೈವ ಮುಖಂಡ ಅಕ್ಕಿ ಚಂದ್ರಶೇಖರ್ ಮತ್ತು ಅವರ ಅನುಯಾಯಿಗಳು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ಚೌಟಗಿ ಅಜ್ಜಪ್ಪ, ಕಾಸಲ್ ಪ್ರಕಾಶ್, ಅಂಬ್ಲಿ ಕೊಟ್ರೇಶಪ್ಪ ಸೋಮಶೇಖರ್ ಮತ್ತಿತರರು ಶಾಸಕರ ನಿವಾಸದಲ್ಲಿ ಹಾಜರಿದ್ದರು.

## ಓದುಗರ ಪತ್ರಗಳು

### ಭ್ರಷ್ಟತೆಗೆ ನಲುಗಿದ ಮತದಾರರು

ಮಾನ್ಯರೇ,

ನಾವೀಗ ವಿಧಾನಸಭೆ ಚುನಾವಣೆ ಎದುರು ನೋಡುತ್ತಿದ್ದೇವೆ. ಹೊರಗೆ ಬೇಸಿಗೆಯ ರಣ ರಣ ಬಿಸಿಲು, ಚುನಾವಣಾ ಮತ ಪ್ರಚಾರದ ರೋಡ್ ಶೋ, ಸಾರ್ವಜನಿಕ ಬೃಹತ್ ಸಭೆಗಳು, ಒತ್ತಡದಲ್ಲಿ ಮತ ಪ್ರಚಾರಕರು. ಹೊರಗೆ ಬಿಸಿಲ ಸೆಖೆ ಎದುರಿಸಿದರೆ, ರಾಜಕೀಯದಲ್ಲಿ ಭ್ರಷ್ಟಾಚಾರ, ಲಂಚಾವತಾರದ ಬಹುಮುಖಗಳ ಪ್ರದರ್ಶನಗಳು. ಲಂಚ, ಭ್ರಷ್ಟತೆಗಳಿಗೆ ತತ್ತರಿಸಿ, ನಲುಗಿದ ಮತದಾರರು.

ರಸ್ತೆ ಬದಿಯ ಮರಗಳನ್ನು ಕಡಿದು ಬೃಹತ್ ಕಾಂಕ್ರೀಟ್ ರಸ್ತೆಗಳು, ಕೃಷಿ ಭೂಮಿಯನ್ನು ನುಂಗಿದ ರಾಷ್ಟ್ರೀಯ ಹೆದ್ದಾರಿಗಳು, ಬೃಹತ್ ಕೈಗಾರಿಕೆಗಳು, ಗಗನಚುಂಬಿ ಕಟ್ಟಡಗಳು. ಏರುತ್ತಿರುವ ಜನಸಂಖ್ಯೆಯ ಒತ್ತಡದ ಪರಿಣಾಮ ನಾವು ಪ್ರಕೃತಿ ಚಕ್ರಗಳನ್ನು ಏರು-ಪೇರು ಮಾಡಿದ್ದೇವೆ.

ಮತ್ತೆ ಭಾರತವು ನಿರಂಕುಶ ಪ್ರಜಾಪ್ರಭುತ್ವದೆಡೆಗೆ ತೆರಳಿ ಇತ್ತೀಚಿನ ರಾಜಕೀಯ ವಿದ್ಯಮಾನಗಳಲ್ಲಿ ಒಂದಾದ ಶ್ರೀಲಂಕಾ ದೇಶದಂತೆ ದುರಾಡಳಿತ ಕಂಡು, ನಮ್ಮ ದೇಶವೂ ಸ್ವತಂತ್ರವನ್ನು ಕಳೆದುಕೊಂಡು, ವಿದೇಶಿಯರ ಆಡಳಿತಕ್ಕೆ ಒಳಗಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಹೊರಗೆ ಭೌತಿಕ ರಾಜಕೀಯದ ಹೊಗೆ. ಒಳಗೆ ಬೌದ್ಧಿಕವಾದ ಮತದಾನದ ಹಗೆಯು, ಭಾರತದ ಆಡಳಿತ ತಂತ್ರದ ಪರಿಣಾಮವು ಚುನಾವಣೆಯ ಮೂಲಕ ಬಣ್ಣ ಬದಲಾಯಿಸಿ ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ತಕ್ಕ ಉತ್ತರ ನೀಡಬಲ್ಲದು.

**ಜೆ.ಎಸ್.ಚಂದ್ರನಾಥ** , ನೀಲಾನಹಳ್ಳಿ.

### ನಿಮ್ಮ ಮತ ಕಸದ ಬುಟ್ಟಿಗೆ ನೀಡಿ..!?

ಮಾನ್ಯರೇ,

ಜನರು ದಾರಿಯಲ್ಲಿ, ಖಾಲಿ ಸೈಟುಗಳಲ್ಲಿ, ಅಂಗಡಿಗಳ ಎದುರುಗಡೆ, ಬಸ್, ಟ್ರೈನ್ ಗಳಲ್ಲಿ ಹೀಗೆ ಎಲ್ಲಿ ಬೇಕೆಂದರಲ್ಲಿ ಕಸ ಹಾಕುತ್ತಾರೆ. ಯಾರಾದರೂ ಹೀಗೆಲ್ಲಾ ಕಸ ಹಾಕಬೇಡಿ ಎಂದು ಹೇಳಿದರೆ, ನೀವು ಯಾರು? ನಮಗೆ ಹೇಳೋದಕ್ಕೆ ಅಂತಾರೆ. ಸ್ವಲ್ಪ ಒಳ್ಳೆಯವರಾದರೆ ಮತ್ತೆ ಎಲ್ಲಿ ಹಾಕಬೇಕು? ಕಸದ ಬುಟ್ಟಿ ಎಲ್ಲೂ ಕಾಣಿಸುತ್ತಿಲ್ಲ ಎಂದು ಹೇಳುತ್ತಾರೆ.

ಅದಕ್ಕೆ ಅವರುಗಳಿಗೆ ಹೇಳಬೇಕು ಅಂದರೆ ನನಗೆ ಅಧಿಕಾರ ಇರಬೇಕು. ಅದಕ್ಕೆ ನಾನು ಚುನಾವಣೆಗೆ ನಿಲ್ಲುವಾ ಅಂತ ಅಂದುಕೊಂಡಿದ್ದೇನೆ. ಮತ್ತೆ ಅವರುಗಳೆಲ್ಲಾ ಕಸ ಹಾಕಲು ಕಸದ ಬುಟ್ಟಿ ಬೇಕಲ್ಲ. ಅದಕ್ಕೆ ಅದನ್ನೇ ಗುರುತು ಮಾಡಿಕೊಂಡಿದ್ದೇನೆ.

ದಯವಿಟ್ಟು ನಿಮ್ಮ ಮತವನ್ನು 'ಕಸದ ಬುಟ್ಟಿ' ಗುರುತಿಗೆ ಹಾಕಿ. ನಿಮ್ಮ ಸೇವೆ ಮಾಡಲು ಅವಕಾಶ ಮಾಡಿ ಕೊಡಿ. ಹೇಗಿದ್ದರೂ ನೀವು ಯಾರಿಗೆ ಮತ ಹಾಕಿದರೂ ಅದು ಕಸದ ಬುಟ್ಟಿ ಸೇರಿದ ಹಾಗೆಯೇ ಆಗುತ್ತದೆ ಅಲ್ಲವೇ..?

**-ಮಮತಾ ನಾಗರಾಜ್**, ದಾವಣಗೆರೆ.

### ಮತ ಚಲಾಯಿಸುವ ಸಂದರ್ಭದಲ್ಲಿ ಗೌಪ್ಯತೆ ಮುಖ್ಯ

ಮಾನ್ಯರೇ,

ಮತ ಚಲಾಯಿಸುವುದು ನಮ್ಮ ಆಜನ್ಮ ಸಿದ್ಧ ಹಕ್ಕು. ಸುಭದ್ರ ಸರ್ಕಾರವನ್ನು ರಚಿಸಲು ನಮ್ಮ ಅತ್ಯಮೂಲ್ಯವಾದ ಮತವನ್ನು ಚಲಾಯಿಸಲೇಬೇಕು.

ಮತಗಟ್ಟೆಯಲ್ಲಿ ಯಾವ ಹಿರಿಯ ರಾಜಕೀಯ ವ್ಯಕ್ತಿಗಳಾಗಿರಲಿ ಅವರನ್ನು ಒಬ್ಬೊಬ್ಬರನ್ನಾಗಿ ಮತಗಟ್ಟೆಯ ಯಂತ್ರದ ಹತ್ತಿರ ಕಳುಹಿಸಬೇಕು. ಕುಟುಂಬದ ಸಮೇತ ಮತ ಚಲಾಯಿಸಲು ಯಂತ್ರದ ಹತ್ತಿರ ಬಿಡಬಾರದು. ಗಂಡನೇ ಆಗಿರಲಿ ಹೆಂಡತಿಯೇ ಆಗಿರಲಿ ಅವರವರ ಹಕ್ಕನ್ನು ಅವರು ಗುಪ್ತವಾಗಿ ಚಲಾಯಿಸಲು ಅನುವು ಮಾಡಿಕೊಡಬೇಕು. ಎಷ್ಟೋ ಬಾರಿ ನಾವು ನೋಡಿರುವ ಹಾಗೆ ರಾಜಕೀಯ ವ್ಯಕ್ತಿಗಳು ಅವರ ಕುಟುಂಬಸ್ಥರೊಂದಿಗೆ ಮತ ಚಲಾಯಿಸಲು ಯಂತ್ರದ ಹತ್ತಿರ ಜೊತೆಗೆ ಹೋಗಿರುತ್ತಾರೆ ಇದನ್ನು ತಡೆಯಬೇಕು ಎಂದು ವಿನಂತಿಸಿಕೊಳ್ಳುತ್ತೇವೆ.

**- ಸೌಮ್ಯ ಸತೀಶ್ ಧಾರವಾಡ**

# ಸರ್ಕಾರಿ ನೌಕರರ ಜಿಲ್ಲಾ ಸಂಘಕ್ಕೆ ವೀರೇಶ್ ಒಡೆನಪುರ ಆಯ್ಕೆ



ದಾವಣಗೆರೆ, ಮೇ 6 - ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಸಂಘದ ಕಚೇರಿಯಲ್ಲಿ ಎಲ್ಲಾ ಪದಾಧಿಕಾರಿಗಳ ಸಮ್ಮುಖದಲ್ಲಿ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿಯವರು ಸಭೆ ಕರೆದು, ಅವರ ಅಧಿಕಾರ ಅವಧಿ ಮುಗಿದ ಕಾರಣ ಅವರ ಸ್ಥಾನಕ್ಕೆ ನೂತನವಾಗಿ ಆಯ್ಕೆಯಾದ ಪಿ.ಡಬ್ಲ್ಯೂ.ಡಿ. ಇಲಾಖೆಯ ಕಚೇರಿ ಅಧೀಕ್ಷಕ ವೀರೇಶ್ ಎಸ್. ಒಡೆನಪುರ ಅವರಿಗೆ ಬಿ.ಪಾಲಾಕ್ಷಿ ಅವರು ಹೂ ಗುಚ್ಛ ನೀಡುವ ಮೂಲಕ ಅಧಿಕಾರ ಹಸ್ತಾಂತರ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯಾಧ್ಯಕ್ಷ ಗುರುಮೂರ್ತಿ ಸಿ, ಜಿಲ್ಲಾ ಖಜಾಂಚಿ ಬಿ.ಆರ್. ತಿಪ್ಪೇಸ್ವಾಮಿ, ಪ್ರಭಾರಿ ರಾಜ್ಯ ಪರಿಷತ್ ಸದಸ್ಯ ಲೋಕಣ್ಣ ಮಾಗೋಡ್ರು, ಗೌರವಾಧ್ಯಕ್ಷ ಡಾ. ಉಮೇಶ್ ಬಿ, ಜಗಳೂರು ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಬಿ.ಆರ್.ಚಂದ್ರಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

# ನಗರದಲ್ಲಿಂದು 'ಚುನಾವಣೆ ಹೆಜ್ಜೆ ಯಕ್ಷರಂಗದ ಗೆಜ್ಜೆ' ನೃತ್ಯ ರೂಪಕ

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯ ಮತದಾನದ ಕುರಿತು ಜಾಗೃತಿ ಮೂಡಿಸಲು ಯಕ್ಷರಂಗ ಯಕ್ಷಗಾನ ಸಂಸ್ಥೆಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಕಲಾಕಂಚ ಕಛೇರಿ ಸಭಾಂಗಣದಲ್ಲಿ ಯಕ್ಷಗಾನ ಬಾಲ ಕಲಾವಿದರಿಂದ 'ಚುನಾವಣೆ ಹೆಜ್ಜೆ ಯಕ್ಷ ರಂಗದ ಗೆಜ್ಜೆ' ನೃತ್ಯ ರೂಪಕ ಹಮ್ಮಿಕೊಳ್ಳಲಾಗಿದೆ ಎಂದು ಯಕ್ಷರಂಗ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

ಮತದಾನದ ಜಾಗೃತಿಯ ಯಕ್ಷಗಾನ ವಾದ್ಯದೊಂದಿಗೆ ಯಕ್ಷಗಾನ ವೇಷದಲ್ಲಿ ಪ್ರತ್ಯಕ್ಷ, ವರ್ಷಿಣಿ, ಪ್ರಜ್ಞಾ ಈ ಬಾಲ ಕಲಾವಿದರು ವೃತ್ತಿನಿರತ ಯಕ್ಷಗಾನ ಕಲಾವಿದರಾದ ಹಟ್ಟಿಯಂಗಡಿ ಆನಂದಶೆಟ್ಟಿಯವರ ನಿರ್ದೇಶನದ ಯಕ್ಷಗಾನ ರೂಪಕದಲ್ಲಿ ಕುಣಿಯುವುದರೊಂದಿಗೆ ಚುನಾವಣೆಯ ಬದ್ಧತೆಯ ಕರ್ತವ್ಯ ಪ್ರಜ್ಞೆಯೊಂದಿಗೆ ಸಾರ್ವಜನಿಕರು ಮತ ಚಲಾಯಿಸುವ ಜಾಗೃತಿ ಮೂಡಿಸಲಿದ್ದಾರೆ ಎಂದು ದಾವಣಗೆರೆ ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಬೇಳೂರು ಸಂತೋಷ್ ಕುಮಾರ ಶೆಟ್ಟಿ ತಿಳಿಸಿದ್ದಾರೆ.

# ಭ್ರಷ್ಟಾಚಾರದ ರೇಟ್ ಕಾರ್ಡ್ : ಸಾಕ್ಷಿ ನೀಡಲು ಕಾಂಗ್ರೆಸ್‌ಗೆ ನೋಟಿಸ್

ನವದೆಹಲಿ, ಮೇ 6 – ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ರೇಟ್ ಕಾರ್ಡ್ ಜಾಹೀರಾತು ಪ್ರಕಟಿಸಿದ್ದ ಕರ್ನಾಟಕ ಕಾಂಗ್ರೆಸ್‌ಗೆ ನೋಟಿಸ್ ಕಳಿಸಿರುವ ಚುನಾವಣಾ ಆಯೋಗ, ಆರೋಪಗಳ ಬಗ್ಗೆ ಭಾನುವಾರ ಸಂಜೆಯ ಒಳಗೆ ಸಾಕ್ಷಿ ಒದಗಿಸುವಂತೆ ತಿಳಿಸಿದೆ.

ಬಿಜೆಪಿ ದೂರು ನೀಡಿದ ನಂತರ ಆಯೋಗ ಈ ಕ್ರಮ ತೆಗೆದುಕೊಂಡಿದೆ. ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಾಹೀರಾತೊಂದನ್ನು ಪ್ರಕಟಿಸಿದ್ದ ಕಾಂಗ್ರೆಸ್, ಬಿಜೆಪಿ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ. ಹಲವಾರು ಹುದ್ದೆಗಳ ನೇಮಕ, ಗುತ್ತಿಗೆ ಇತ್ಯಾದಿಗಳಿಗೆ ನಿರ್ದಿಷ್ಟವಾಗಿ ಇಂತಿಷ್ಟು ಲಂಚ ಪಡೆದಿದೆ ಎಂದು ಆರೋಪಿಸಿತ್ತು. ಕಾಂಗ್ರೆಸ್ ಪಕ್ಷವು ನಿರ್ದಿಷ್ಟ 'ವಾಸ್ತವಾಂಶ'ಗಳನ್ನು ಜಾಹೀರಾತಿನಲ್ಲಿ ಪ್ರಕಟಿಸಿದೆ. ಹೀಗಾಗಿ ಈ ಜಾಹೀರಾತಿನಲ್ಲಿರುವ ಅಂಶಗಳಿಗೆ ಪರಿಶೀಲಿಸಬಹುದಾದ ಸಾಕ್ಷಿಗಳಿವೆ ಎಂಬುದು ನ್ಯಾಯೋಚಿತ ನಂಬಿಕೆಯಾಗಿದೆ ಎಂದು ಆಯೋಗ ನೋಟಿಸ್‌ನಲ್ಲಿ ತಿಳಿಸಿದೆ.

ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷರು ಈ ಜಾಹೀರಾತಿಗೆ ಸಂಬಂಧಿಸಿದ ಸಾಕ್ಷಿಗಳನ್ನು ಭಾನುವಾರ ಸಂಜೆ 7 ಗಂಟೆಯ ಒಳಗೆ ಸಲ್ಲಿಸಬೇಕು ಹಾಗೂ ಸಾರ್ವಜನಿಕರಿಗೂ ಪ್ರಕಟಿಸಬೇಕು ಎಂದು ಆಯೋಗ ಹೇಳಿದೆ.

# ತಾಲ್ಲೂಕು ಕಸಾಪದಿಂದ ಕನ್ನಡ ಸಾಹಿತ್ಯ ಪರಿಷತ್‌ನ ಸಂಸ್ಥಾಪನಾ ದಿನಾಚರಣೆ



ದಾವಣಗೆರೆ, ಮೇ 6- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ಕೆ.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸ, ಗೌರವ ಸನ್ಮಾನ ಹಾಗೂ ಕನ್ನಡ ಗೀತೆಗಳ ಗಾಯನ ಕಾರ್ಯಕ್ರಮವನ್ನು ನಡೆಸಲಾಯಿತು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ನಿರ್ದೇಶಕರಾದ ಶ್ರೀಮತಿ ಎ.ಎಲ್. ನಾಗವೇಣಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್. ಚನ್ನಬಸಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಶೋಧನಾ ಮಾರ್ಗದರ್ಶಕರು ಹಾಗೂ ವಿಶ್ರಾಂತ ಪ್ರಾಧ್ಯಾಪಕರೂ ಆದ ಡಾ. ಎಸ್. ಶಿವಯ್ಯ ಅವರು ಕನ್ನಡ ನಾಡಿನ ಸಂಪತ್ತು ಕನ್ನಡ ಸಾಹಿತ್ಯ ಪರಿಷತ್ ನಡೆದು ಬಂದ ದಾರಿಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳಾದ ಷಡಾಕ್ಷರಪ್ಪ, ಮಮತಾ ಹಿರೇಮಠ, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕ ಡಾ. ರುದ್ರಮುನಿ ಹಿರೇಮಠ್ ಉಪಸ್ಥಿತರಿದ್ದರು. ಡಾ. ರುದ್ರಮುನಿ ಹಿರೇಮಠ ತಾವು ಸಂಗ್ರಹಿಸಿರುವ ಪುರಾತನ ತಾಳೆಗರಿ ಸಾಹಿತ್ಯದ ಆಕರಗಳನ್ನು ಪ್ರದರ್ಶಿಸಿದ್ದು ಎಲ್ಲರ ಗಮನ ಸೆಳೆಯಿತು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕ ಶಿವಕುಮಾರ್ ಪ್ರಾಸ್ತಾವಿಕ ನುಡಿಗಳನ್ನಾಡಿ ದರು. ಆಕಾಶವಾಣಿ ಮತ್ತು ದೂರದರ್ಶನ ಕಲಾವಿದ ಅಜಯ್ ನಾರಾಯಣ್ ಅವರು ಸುಮಧುರ ಕನ್ನಡ ಗೀತೆ ಗಾಯನ ಮಾಡಿದರು.

ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಥಮ ಹಾಗೂ ದ್ವಿತೀಯ ಬಿ.ಇಡಿ. ಪ್ರಶಿಕ್ಷಣಾರ್ಥಿಗಳು ಕನ್ನಡ ಗೀತೆಗಳನ್ನು ಹಾಡಿದರು. ಯಶಸ್ವಿನಿ, ಶಿಲ್ಪ, ಚೈತ್ರ, ಐಶ್ವರ್ಯ ಪ್ರಾರ್ಥಿಸಿದರು. ಸಹನ ಸ್ವಾಗತಿಸಿದ್ದು ಸಿದ್ದೇಶ್ ಮತ್ತು ಚಂದನ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.


## ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : **ಪ್ರಿಯಾಂಕ ಜಿ.ಪಿ., ಇಂಜಿನಿಯರ್**
**+91 70190 70400**

**#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.**



## ಸಾರ್ವಜನಿಕರಿಗೆ ತಿಳುವಳಿಕೆಗಾಗಿ

ನನ್ನ ಕಕ್ಷಿದಾರರು ಬೆಂಗಳೂರು ಸಿಟಿ ಲಕ್ಷ್ಮೀನಾರಾಯಣಪುರಂ, 3ನೇ ಮೇನ್, 11ನೇ ಕ್ರಾಸ್, ಡೋರ್ ನಂ.42/3ರಲ್ಲಿ ವಾಸವಾಗಿರುವ **ಶ್ರೀ. ಎ.ಕೆ.ಶ್ರೀನಿವಾಸಮೂರ್ತಿ ಬಿನ್ ಲೇಟ್ ಎ. ಕೃಷ್ಣಮೂರ್ತಿ**, ಇವರಿಂದ ಈ ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಖರೀದಿಸುತ್ತಿದ್ದಾರೆ. ಸದರಿ ಕೆಳಕಂಡ ಆಸ್ತಿಯ ಸಂಬಂಧ ಯಾರಾದರೂ ಏನಾದರೂ ತಕರಾರು ಇದ್ದರೆ ಅಥವಾ ಹಕ್ಕು, ಅಧಿಕಾರ ವಗೈರೆಗಳಿದ್ದರೆ, ಇಂದಿನಿಂದ ಏಳು ದಿನಗಳ ಒಳಗಾಗಿ ತಮ್ಮ ಹಕ್ಕು, ಅಧಿಕಾರ, ತಕರಾರುಗಳನ್ನು ಲಿಖಿತವಾಗಿ ಸೂಕ್ತ ದಾಖಲೆಗಳೊಂದಿಗೆ ಈ ಕೆಳಕಾಣಿಸಿದ ನನ್ನ ವಿಳಾಸಕ್ಕೆ ತಲುಪಿಸತಕ್ಕದ್ದು. ತಪ್ಪಿದಲ್ಲಿ ಯಾರದೂ ಯಾವುದೇ ತಕರಾರು, ಹಕ್ಕು, ಅಧಿಕಾರ ವಗೈರೆ ಗಳಿಲ್ಲವೆಂದು ತಿಳಿದು ಮೇಲ್ಕಂಡ ನನ್ನ ಕಕ್ಷಿದಾರರು ಸದರಿ ಆಸ್ತಿಯನ್ನು ಖರೀದಿಸುತ್ತಾರೆ. ತಿಳಿಯತಕ್ಕದ್ದು. ಏಳು ದಿನಗಳ ನಂತರ ಬಂದಂತಹ ಯಾವುದೇ ತಕರಾರು ವಗೈರೆಗಳನ್ನು ಪರಿಗಣಿಸುವುದಿಲ್ಲ ತಿಳಿಯಿರಿ.

**ಷೆಡ್ಯೂಲ್ :** ದಾವಣಗೆರೆ ಸಬ್ ರಿಜಿಸ್ಟ್ರಾರ್ ರವರ ಅಧಿಕಾರಕ್ಕೆ ಒಳಪಟ್ಟ 23ನೇ ವಾರ್ಡ್, ಮ್ಯಾಸಬೇಡರಕೇರಿಯಲ್ಲಿ ಬರುವ ಕರೇಹಂಚಿನ ಮನೆ ಇರತಕ್ಕ ಮಹಾನಗರಪಾಲಿಕೆಯ ಚಾಲ್ತಿ ಡೋರ್ ನಂ. 302/1 ರಿಂದ 3 (302/1) ಒಟ್ಟು ಅಳತೆ **9.30x** $\frac{12.00+12.30}{2}$ ಮೀಟರ್ ಪೈಕಿ ಪೂರ್ವ ಭಾಗದ ಅಳತೆ ಅಡಿಗಳಲ್ಲಿ 10x40 ಅಡಿವುಳ್ಳ ಜಾಗದಲ್ಲಿ ಸುಮಾರು 70 ವರ್ಷಗಳ ಹಿಂದೆ ಕಟ್ಟಿರತಕ್ಕ 400 ಚದುರಡಿ ಕರೇಹಂಚಿನ ಮನೆ, ಇದಕ್ಕೆ ಚಕ್ಕುಬಂದಿ:- ಪೂರ್ವಕ್ಕೆ: ಕೃಷ್ಣಪ್ಪನವರ ಮನೆ, ಪಶ್ಚಿಮಕ್ಕೆ: ಮೂಡಲಗಿರಿಯಪ್ಪರವರ ಮನೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕನ್ಸರ್‌ವೆನ್ಸಿ, ಈ ಮಧ್ಯದ ಸ್ವತ್ತು.

**ಕೆ.ಆರ್.ಅಪ್ಪಾಜಿ**, ಬಿ.ಕಾಂ. ಎಲ್‌ಎಲ್.ಬಿ.,
**ವಕೀಲರು,**
**ಮನೆ ನಂ.544/4, ಕೆ.ಟಿ.ಜೆ ಕಾಂಪೌಂಡ್,**
**ಕೆ.ಬಿ. ಬಡಾವಣೆ, ದಾವಣಗೆರೆ, ಮೊ. : 98445-85155**

